ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-01-1998.

# *ಪಾಸ್ ವಿತ್ ಆನರ್ ಆಗಲು ಪ್ರತಿಯೊಂದು ಖಜಾನೆಯ ಖಾತೆಯನ್ನು ಪರಿಶೀಲಿಸಿ ಜಮಾ ಮಾಡಿಕೊಳ್ಳಿರಿ.*

(पास विथ आनर बनने के लिए हर खज़ाने का एकाउण्ट चेक करके जमा करो)

ಇಂದು ಬಾಪ್‌ದಾದಾರವರು ಪ್ರತಿಯೊಂದು ಚಿಕ್ಕಪುಟ್ಟ ನಾಲ್ಕಾರು ಕಡೆಯ ಹಾಗೂ ದೇಶ ವಿದೇಶದ ಮಕ್ಕಳ ಭಾಗ್ಯವನ್ನು ನೋಡಿ ಹರ್ಷಿತರಾಗುತ್ತಿದ್ದರು. ಇಂತಹ ಭಾಗ್ಯ ಇಡಿ ಕಲ್ಪದಲ್ಲಿ ಬ್ರಾಹ್ಮಣ ಅತ್ಮರ ಹೊರತು ಬೇರೆ ಯಾರಿಗೂ ಇರಲು ಸಾಧ್ಯವಿಲ್ಲ. ದೇವತೆಗಳು ಸಹ ಬ್ರಾಹ್ಮಣ ಜೀವನವನ್ನು ಶ್ರೇಷ್ಠ ಎಂದು ತಿಳಿಯುತ್ತಾರೆ. ಪ್ರತಿಯೊಬ್ಬರು ತಮ್ಮ ಜೀವನದ ಆದಿಯಿಂದ ನೋಡಿಕೊಳ್ಳಿರಿ- ನಮ್ಮ ಭಾಗ್ಯ ಜನ್ಮವಾದಾಗಿನಿಂದ ಎಷ್ಟು ಶ್ರೇಷ್ಠವಾಗಿದೆ ಎಂದು ಜೀವನದಲ್ಲಿ ಜನ್ಮವಾಗುತ್ತಿದ್ದಂತೆಯೇ ತಂದೆ ತಾಯಿಯ ಪಾಲನೆಯ ಭಾಗ್ಯ ಸಿಕ್ಕಿತು. ಅದರ ನಂತರ ವಿದ್ಯೆಯ ಭಾಗ್ಯ ಸಿಕ್ಕಿತು. ಅದರ ನಂತರ ಗುರುವಿನ ಮೂಲಕ ಮತ ಹಾಗೂ ವರದಾನ ಸಿಕ್ಕಿತು. ಮಕ್ಕಳಾದ ನಿಮಗೆ ಪಾಲನೆ, ವಿದ್ಯೆ ಹಾಗೂ ಶ್ರೀಮತದ, ವರದಾನವನ್ನು ಕೊಡುವವರು ಯಾರು? ಪರಮಾತ್ಮನ ಮುಖಾಂತರ ಈ ಮೂರು ಸಹ ಪ್ರಾಪ್ತಿಯಾಗಿದೆ ಪಾಲನೆಯನ್ನು ನೋಡಿ- ಪರಮಾತ್ಮನ ಪಾಲನೆ ಎಷ್ಟು ಸ್ವಲ್ಪ ಜನರಿಗೆ ಸಿಗುತ್ತದೆ. ಕೋಟಿಯಲ್ಲಿ ಕೆಲವರಿಗೆ ಸಿಗುತ್ತದೆ. ಪರಮಾತ್ಮ ಶಿಕ್ಷಕನ ಶಿಕ್ಷಣ ನಿಮ್ಮ ಹೊರತು ಬೇರೆ ಯಾರಿಗೂ ಸಿಗುವುದಿಲ್ಲ. ಸದ್ಗುರುವಿನ ಮುಖಾಂತರ ಶ್ರೀಮತ, ವರದಾನ ನಿಮಗೆ ಪ್ರಾಪ್ತಿಯಾಗುತ್ತದೆ ಎಂದ ಮೇಲೆ ನಿಮ್ಮ ಭಾಗ್ಯವನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಾ? ಭಾಗ್ಯವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾ ಉಯ್ಯಾಲೆಯಲ್ಲಿ ತೂಗುತ್ತಾ ಇರುತ್ತೀರಾ. ಗೀತೆ ಹಾಡುತ್ತಾ ಇರುತ್ತೀರಾ- ವಾಹ್ ನನ್ನ ಭಾಗ್ಯ!

ಅಮೃತ ವೇಳೆಯಿಂದ, ಎದ್ದಾಗಿನಿಂದ ಹಿಡಿದು ಪರಮಾತ್ಮನ ಪ್ರೀತಿಯಲ್ಲಿ ಲವಲೀನರಾಗಿ ಎದ್ದೇಳುತ್ತೀರಿ. ಪರಮಾತ್ಮನ ಪ್ರೀತಿ ಎಬ್ಬಿಸುತ್ತದೆ. ದಿನಚರಿಯ ಆದಿಯು ಪರಮಾತ್ಮನ ಪ್ರೀತಿಯಿಂದ ಆಗುತ್ತದೆ. ಪ್ರೀತಿ ಇಲ್ಲದಿದ್ದರೆ ಎದ್ದೇಳಲು ಸಾಧ್ಯವಿಲ್ಲ. ಪ್ರೀತಿಯೇ ನಿಮ್ಮ ಸಮಯದ ಗಂಟೆಯಾಗಿದೆ. ಪ್ರೀತಿಯ ಗಂಟೆ ನಿಮ್ಮನ್ನು ಎದ್ದೇಳಿಸುತ್ತದೆ. ಇಡೀ ದಿನದಲ್ಲಿ ಪರಮಾತ್ಮನ ಜೊತೆ ಪ್ರತಿಯೊಂದು ಕಾರ್ಯವನ್ನು ಮಾಡಿಸುತ್ತದೆ. ಎಷ್ಟು ಶ್ರೇಷ್ಠಭಾಗ್ಯವಾಗಿದೆ- ಸ್ವಯಂ ತಂದೆ ತನ್ನ ಪರಮಧಾಮವನ್ನು ಬಿಟ್ಟು ನಿಮಗೆ ಶಿಕ್ಷಣ ಕೊಡುವುದಕ್ಕಾಗಿ ಬರುತ್ತಾರೆ. ಈ ರೀತಿ ಎಂದಾದರೂ ಕೇಳಿದ್ದೀರಾ- ಭಗವಂತ ಪ್ರತಿದಿನ ತಮ್ಮ ಧಾಮವನ್ನು ಬಿಟ್ಟು ಓದಿಸುವುದಕ್ಕಾಗಿ ಬರುತ್ತಾರೆ! ಆತ್ಮರು ಬಲೆ ಎಷ್ಟೇ ದೂರ ದೂರದಿಂದ ಬರುತ್ತಾರೆ, ಆದರೆ ಪರಮಧಾಮಕ್ಕಿಂತ ದೂರ ಬೇರೆ ಯಾವ ದೇಶವೂ ಇಲ್ಲ. ಯಾವುದಾದರೂ ದೇಶ ಇದೆಯೇ? ಅಮೆರಿಕಾ, ಅಫ್ರಿಕಾ ದೂರ ಇದೆಯೇ? ಪರಮಧಾಮ ಶ್ರೇಷ್ಠಾತಿ ಶ್ರೇಷ್ಠ ಧಾಮವಾಗಿದೆ ಶ್ರೇಷ್ಠಾತಿ ಶ್ರೇಷ್ಠ ಧಾಮದಿಂದ ಶ್ರೇಷ್ಠಾತಿ ಶ್ರೇಷ್ಠ ಭಗವಂತ, ಶ್ರೇಷ್ಠಾತಿ ಶ್ರೇಷ್ಠ ಮಕ್ಕಳನ್ನು ಓದಿಸಲು ಬರುತ್ತಾರೆ. ಇಂತಹ ತಮ್ಮ ಭಾಗ್ಯವನ್ನು ಅನುಭವ

ಮಾಡುತ್ತೀರಾ? ಸದ್ಗುರುವಿನ ರೂಪದಲ್ಲಿ ಪ್ರತಿ ಕಾರ್ಯದಲ್ಲಿ ಶ್ರೀಮತವನ್ನು ಕೊಡುತ್ತಾರೆ ಹಾಗೂ ಜೊತೆಯನ್ನು ಕೊಡುತ್ತಾರೆ. ಕೇವಲ ಮತವನ್ನು ಕೊಡುವುದಿಲ್ಲ. ಜೊತೆಯನ್ನು ಸಹ ಕೊಡುತ್ತಾರೆ. ನೀವು ಯಾವ ಗೀತೆಯನ್ನು ಹಾಡುತ್ತೀರಿ? ನನ್ನ ಜೊತೆಯಲ್ಲಿ ಇದ್ದಾರೆ ಎಂದು ಹೇಳುತ್ತೀರಾ ಅಥವಾ ದೂರ ಇದ್ದಾರೆ ಎಂದು ಹೇಳುತ್ತೀರಾ? ಜೊತೆಯಲಿದ್ದಾರೆ ಅಲ್ಲವೇ? ಒಂದು ವೇಳೆ ಕೇಳುತ್ತಿದ್ದರೂ ಪರಮಾತ್ಮ ಶಿಕ್ಷಕನಿಂದ, ತಿಂದರೂ ಸಹ ಬಾಪ್‌ದಾದಾರವರ ಜೊತೆಯಲ್ಲಿಯೇ ತಿನ್ನುತ್ತೀರಿ. ಒಬ್ಬರೇ ತಿನ್ನುತ್ತೀರಿ ಎಂದರೆ ಅದು ನಿಮ್ಮ ತಪ್ಪಾಗಿದೆ. ತಂದೆಯಂತು ಹೇಳುತ್ತಾರೆ ನನ್ನ ಜೊತೆ ತಿನ್ನಿರಿ ಎಂದು ನೀವು ಮಕ್ಕಳ ಪ್ರತಿಜ್ಞೆಯೂ ಆಗಿದೆ- ಜೊತೆಯಲ್ಲಿಯೇ ಇರುತ್ತೇವೆ, ಜೊತೆಯಲ್ಲಿಯೇ ತಿನ್ನುತ್ತೇವೆ, ಜೊತೆಯಲ್ಲಿಯೇ ಕುಡಿಯುತ್ತೇವೆ, ಜೊತೆಯಲ್ಲಿಯೇ ಮಲಗುತ್ತೇವೆ ಹಾಗೂ ಜೊತೆಯಲ್ಲಿಯೇ ನಡೆಯುತ್ತೇವೆ. ಮಲಗುವುದು ಸಹ ಒಬ್ಬರೇ ಅಲ್ಲ, ಒಬ್ಬರೇ ಮಲಗಿದರೆ ಕೆಟ್ಟ ಸ್ವಪ್ನ ಹಾಗೂ ಕೆಟ್ಟ ಸಂಕಲ್ಪಗಳು ಸ್ವಪ್ನದಲ್ಲಿಯೂ ಬರುತ್ತದೆ. ಆದರೆ ತಂದೆಯ ಪ್ರೀತಿ ಎಷ್ಟಿದೆ ಎಂದರೆ ಸದಾ ಹೇಳುತ್ತಾರೆ ನನ್ನ ಜೊತೆಯೇ ಮಲಗಿರಿ, ಒಬ್ಬರೇ ಮಲಗಬೇಡಿ, ಎದ್ದರೂ ಜೊತೆಯಲ್ಲಿಯೇ, ಮಲಗಿದರೂ ಜೊತೆಯಲ್ಲಿಯೇ, ತಿಂದರೂ ಜೊತೆಯಲ್ಲಿಯೇ, ನಡೆದರೂ ಜೊತೆಯಲ್ಲಿಯೇ. ಒಂದು ವೇಳೆ ಕಚೇರಿಗೆ ಹೋದರೂ, ಬಿಸಿನೆಸ್ (ವ್ಯಾಪಾರ) ಮಾಡುತ್ತಿದ್ದರೂ ಅರ್ಥಾತ್ ವ್ಯಾಪಾರದಲ್ಲಿ ನೀವು ಟ್ರಸ್ಟಿ ಆಗಿದ್ದೀರಿ ಆದರೆ ಮಾಲಿಕ ತಂದೆಯಾಗಿದ್ದಾರೆ. ಕಚೇರಿಗೆ ಹೋಗುತ್ತಿದ್ದರೂ ನಮ್ಮ ಡೈರೆಕ್ಟರ್( ನಿರ್ದೇಶಕ), ಬಾಸ್(ಮಾಲಿಕ) ಬಾಪ್‌ದಾದಾ ಆಗಿದ್ದಾರೆ ಎಂದು ತಿಳಿಯಬೇಕು. ಇದು ನಿಮಿತ್ತ ಮಾತ್ರವಾಗಿದೆ. ಅವರ ನಿರ್ದೇಶನದಂತೆ ಕೆಲಸ ಮಾಡುತ್ತೀರಿ. ಎಂದಾದರೂ ಉದಾಸರಾದರೆ ತಂದೆ ಗೆಳೆಯನಾಗಿ ವಿನೋದಪಡಿಸುತ್ತಾರೆ( ನಗಿಸುತ್ತಾರೆ). ಗೆಳೆಯನೂ ಆಗುತ್ತಾರೆ. ಎಂದಾದರೂ ಪ್ರೀತಿಯಿಂದ ಅತ್ತರೆ ಕಣ್ಣೀರು ಬಂದರೆ ತಂದೆ ಕಣ್ಣೀರು ವರಿಸಲು ಸಹ ಬರುತ್ತಾರೆ ಹಾಗೂ ನಿಮ್ಮ ಕಣ್ಣೀರನ್ನು ಹೃದಯದ 4 ಡಬ್ಬಿಗಳಲ್ಲಿ ಮುತ್ತಿನ ಸಮಾನ ಜಮಾ ಮಾಡಿಕೊಳ್ಳುತ್ತಾರೆ. ಆಗಾಗ ತುಂಟರಾಗಿ ಮುನಿಯತ್ತಿದ್ದೀರಿ ಬಹಳ ಮಧುರಾತಿ ಮಧುರವಾಗಿ ಮುನಿಯತ್ತಿದ್ದೀರಿ ಆದರೆ ಮುನಿದವರನ್ನು ಸಹ ಬಾಬಾ ಮಾತನಾಡಿಸುತ್ತಿದ್ದಾರೆ ಏನು ಪರವಾಗಿಲ್ಲ ಮುಂದಕ್ಕೆ ಹೋಗಿರಿ , ಆದದ್ದೇನೋ ಆಗಿ ಹೋಯಿತು ಮರೆತುಹೋಗಿರಿ ಎಂದು ನಿಮ್ಮನ್ನು ಒಪ್ಪಿಸುತ್ತಿದ್ದಾರೆ. ಆದ್ದರಿಂದ ನಮ್ಮ ಪ್ರತಿಯೊಂದು ದಿನಚರಿ ಯಾರೊಂದಿಗೆ ಇದೆ? ಬಾಪ್‌ದಾದಾರವರ ಜೊತೆ, ಬಾಪ್‌ದಾದಾರವರಿಗೆ ಕೆಲವೊಮ್ಮೆ ಮಕ್ಕಳ ಮಾತಿನಿಂದ ನಗು ಬರುತ್ತದೆ. ನಿಮ್ಮನ್ನು ಮರೆತು ಹೋಗುತ್ತೇವೆ ಎಂದು ಮಕ್ಕಳು ಹೇಳುತ್ತಾರೆ. ಒಂದುಕಡೆ ಹೇಳುತ್ತಾರೆ ಕಂಬೈಂಡ್ ಆಗಿದ್ದೇವೆ ಎಂದು, ಕಂಬೈಂಡ್ ಆಗಿರುವವರು ಎಂದಾದರೂ ಮರೆಯಲು ಸಾಧ್ಯವೇ? ಯಾರು ಜೊತೆ-ಜೊತೆಯಲ್ಲಿರುತ್ತಾರೆಯೋ ಅವರನ್ನು ಮರೆಯಲು ಸಾಧ್ಯವೇ?ಎಂದಮೇಲೆ ಬಾಬಾರವರು ಹೇಳುತ್ತಾರೆ. ಆದರೆ ಮಕ್ಕಳಲ್ಲಿ ಎಷ್ಟು ಶಕ್ತಿ ಇದೆ ಎಂದರೆ ಕಂಬೈನ್ಡ್‌ಆಗಿ ಇರುವವರನ್ನು ಕೂಡ ಬೇರೆ ಮಾಡಿ ಬಿಡುತ್ತಿದ್ದಾರೆ! ಶಾಬಾಸ್- ಮಕ್ಕಳೇ ಎನ್ನುತ್ತಿದ್ದಾರೆ. ಕಂಬೈನ್ಡ್ ಆಗಿ ಇರುತ್ತಿದ್ದೀರಿ ಆದರೆ ಯಾವುದಾದರೂ ಮಾಯೆ ಬಂದರೆ ಕಂಬೈನ್ಡ್ ಅನ್ನು ಸಹ ಬೇರೆ ಮಾಡಿಬಿಡುತ್ತಿದ್ದೀರಿ.

ಬಾಪ್‌ದಾದಾರವರು ಮಕ್ಕಳ ಆಟವನ್ನು ನೋಡೀ ಇದನ್ನೇ ಹೇಳುತ್ತಾರೆ ಮಕ್ಕಳೇ ತಮ್ಮ ಭಾಗ್ಯವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ. ಏನಗುತ್ತದೆ ಎಂದರೆ- ಯೋಚಿಸುತ್ತೀರಿ ಹೌದು ನನ್ನ ಭಾಗ್ಯ ಬಹಳ ಶ್ರೇಷ್ಟವಾಗಿದೆ ಎಂದು ಆದರೆ

ಯೋಚಿಸುವ ಸ್ವರೂಪರಾಗುತ್ತೀರಿ, ಸ್ಮೃತಿ ಸ್ವರೂಪರಾಗಿವುದಿಲ್ಲ. ಬಹಳ ಚೆನ್ನಾಗಿ ಯೋಚಿಸುತ್ತೀರಿ - ನಾನಂತು ಇದಾಗಿದ್ದೇನೆ. ನಾನಂತು ಇದಾಗಿದ್ದೇನೆ. ನಾನಂತು ಇದಾಗಿದ್ದೇನೆ.. ಬಹಳ ಚೆನ್ನಾಗಿ ಹೇಳುತ್ತೀರಿ. ಆದರೆ ಏನನ್ನು ಯೋಚಿಸಿ, ಏನನ್ನು ಹೇಳುತ್ತೀರೋ ಅದರ ಸ್ವರೂಪರಾಗಿಬಿಡಿ. ಸ್ವರೂಪರಾಗುವುದರಲ್ಲಿ ಬಲಹೀನತೆ ಬಂದು ಬಿಡುತ್ತದೆ. ಪ್ರತಿಯೊಂದು ವಿಷಯದಲ್ಲಿ ಸ್ವರೂಪರಾಗಿಬಿಡಿ ಯಾವುದನ್ನು ಯೋಚಿಸುತ್ತೀರೋ ಅದನ್ನು ಸ್ವರೂಪದಲ್ಲಿಯೂ ಅನುಭವ ಮಾಡಿ ಎಲ್ಲದಕ್ಕಿಂತ ದೊಡ್ಡದು ಅನುಭವೀ ಮೂರ್ತರಾಗುವುದಾಗಿದೆ. ಅನಾದಿ ಕಾಲದಲ್ಲಿ ಪರಮಧಾಮದಲ್ಲಿ ಇದ್ದಾಗ ಯೋಚಿಸುವ ಸ್ವರೂಪರಾಗಿರುವುದಿಲ್ಲ. ಸ್ಮೃತಿ ಸ್ವರೂಪರಾಗಿರುತ್ತೀರಿ ನಾನು ಅತ್ಮನಾಗಿದ್ದೇನೆ, ನಾನು ಅತ್ಮನಾಗಿದ್ದೇನೆ ಎಂಬುದನ್ನೂ ಸಹ ಯೋಚಿಸುವುದಿಲ್ಲ, ಸ್ವರೂಪರೇ ಆಗಿರುತ್ತೀರಿ. ಆದಿ ಕಾಲದಲ್ಲಿಯೂ ಸಹ ಈ ಸಮಯದ ಪುರುಷಾರ್ಥದ ಪ್ರಾಲಬ್ಧ ಸ್ವರೂಪರಾಗಿರುವಿರಿ. ಯೋಚಿಸಬೇಕಾಗಿಲ್ಲ. ನಾನು ದೇವತೆ, ನಾನು ದೇವತೆಯಾಗಿದ್ದೇನೆ ಎಂದು, ಸ್ವರೂಪವೇ ಆಗಿದ್ದೀರಿ. ಅನಾದಿಕಾಲ, ಆದಿಕಾಲದಲ್ಲಿ ಸ್ವರೂಪರಾಗಿದ್ದೀರಿ ಎಂದಮೇಲೆ ಈಗಲೂ ಸಹ ಸ್ವರೂಪರಾಗಿರಿ. ಸ್ವರೂಪರಾಗುವುದರಿಂದ ನಿಮ್ಮ ಗುಣ, ಶಕ್ತಿಗಳು ಸ್ವತಃವಾಗಿಯೇ ಪ್ರತ್ಯಕ್ಷವಾಗುವವು. **ಯಾವುದೇ ಉದ್ಯೋಗದವರಾದರೂ ತಮ್ಮ ಸೀಟಿನ ಮೇಲೆ ಸೆಟ್ ಆದಾಗ ಆ ಉದ್ಯೋಗದ ಗುಣಗಳು ಹಾಗು ಕರ್ತವ್ಯ ಸ್ವತಃವಾಗಿಯೇ ಪ್ರತ್ಯಕ್ಷವಾಗುತ್ತದೆ. ಅದೇ ರೀತಿ ನೀವು ತಮ್ಮ ಸ್ವರೂಪದ ಸೀಟಿನಲ್ಲಿ ಸೆಟ್ ಆಗಿರಿ ಆಗ ಪ್ರತಿಯೊಂದು ಗುಣ, ಶಕ್ತಿ, ಪ್ರತಿಯೊಂದು ಪ್ರಕಾರದ ನಶೆಯು ಸ್ವತಃವಾಗಿ ಪ್ರತ್ಯಕ್ಷವಾಗುವುದು. ಪರಿಶ್ರಮ ಪಡಬೇಕಾಗಿಲ್ಲ. ಇದಕ್ಕೇ ಹೇಳಲಾಗುತ್ತದೆ ಬ್ರಾಹ್ಮಣತನದ ನ್ಯಾಚುರಲ್ ನೇಚರ್(ಸ್ವಾಭಾವಿಕ ಸಂಸ್ಕಾರ), ಇದರಲ್ಲಿ ಬೇರೆ ಎಲ್ಲಾ ಜನ್ಮಗಳ ಸಂಸ್ಕಾರಗಳು ಸಮಾಪ್ತಿಯಾಗಿಹೋಗುತ್ತವೆ. ಬ್ರಾಹ್ಮಣ ಜೀವನದ ಸ್ವಾಭಾವಿಕ ಸಂಸ್ಕಾರ- ಗುಣ ಸ್ವರೂಪ, ಸರ್ವ ಶಕ್ತಿ ಸ್ವರೂಪ ಹಾಗು ಉಳಿದ ಹಳೆಯ ಸಂಸ್ಕಾರಗಳೇನೆಲ್ಲಾ ಇವೆಯೋ ಅವು ಬ್ರಾಹ್ಮಣ ಜೀವನದ ಸಂಸ್ಕಾರಗಳಲ್ಲ. ನನ್ನ ಸಂಸ್ಕಾರವಾಗಿದೆ ನನ್ನ ಸ್ವಭಾವವೇ ಹೀಗೆ ಎಂದು ಹೇಳುತ್ತೀರಿ ಆದರೆ ನನ್ನ ಸಂಸ್ಕಾರ ಎಂದು ಯಾರು ಹೇಳುತ್ತಾರೆ? ಬ್ರಾಹ್ಮಣರೇ ಅಥವಾ ಕ್ಷತ್ರಿಯರೇ?ಅಥವಾ ಹಿಂದಿನ ಜನ್ಮದ ಸ್ಮೃತಿ ಸ್ವರೂಪ ಆತ್ಮ ಹೇಳುತ್ತದೆಯೇ?ಬ್ರಾಹ್ಮಣರ ಸಂಸ್ಕಾರ- ಯಾವುದು? ಬ್ರಹ್ಮಾ ತಂದೆಯ ಸಂಸ್ಕಾರವೇ ಬ್ರಾಹ್ಮಣರ ಸಂಸ್ಕಾರ. ಅಂದಮೇಲೆ ಯೋಚಿಸಿ ಯಾವ ಸಮಯ ನನ್ನ ಸಂಸ್ಕಾರ, ನನ್ನ ಸ್ವಭಾವ ಎಂದು ಹೇಳುತ್ತೀರೋ. ಬ್ರಾಹ್ಮಣ ಜೀವನದಲ್ಲಿ ನನ್ನ ಸಂಸ್ಕಾರ, ನನ್ನ ಸ್ವಭಾವ...ಎಂಬ ಶಬ್ಧವು ಇರಲು ಸಾಧ್ಯವೇ? ಒಂದು ವೇಳೆ ಈಗಲೂ ತೊಲಗಿಸಿಕೊಳ್ಳುತ್ತಾ ಇದ್ದರೆ ಮತ್ತು ಹಿಂದಿನ ಸಂಸ್ಕಾರಗಳು ಪ್ರತ್ಯಕ್ಷವಾಗುತ್ತಾ ಇದ್ದರೆ ಆ ಸಮಯದಲ್ಲಿ ನಾನು ಬ್ರಾಹ್ಮಣನಲ್ಲ ಕ್ಷತ್ರಿಯನು. ತೊಲಗಿಸಿಕೊಳ್ಳಲು ಯುದ್ಧ ಮಾಡುತ್ತಿದ್ದೇನೆ ಎಂದು ಭಾವಿಸಿ.** ಹೀಗೆ ಆಗಾಗ ಬ್ರಾಹ್ಮಣರಾಗಿ, ಆಗಾಗ ಕ್ಷತ್ರಿಯರಾಗುತ್ತಿದ್ದೀರಾ? ಏನೆಂದು ಕರೆಯಿಸಿಕೊಳ್ಳುತ್ತಿದ್ದೀರಿ? ಕ್ಷತ್ರಿಯ ಕುಮಾರರೇ ಅಥವಾ ಬ್ರಹ್ಮಕುಮಾರರೇ? ಯಾರು? ಕ್ಷತ್ರಿಯ ಕುಮಾರರಾ ಏನು? ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರು. ಬೇರೆ ಹೆಸರಂತೂ ಇಲ್ಲವೇ ಇಲ್ಲ. ಯಾರನ್ನಾದರೂ ಕರೆಯುತ್ತೀರಾ- ಕ್ಷತ್ರಿಯ ಕುಮಾರ ಬನ್ನಿ ಎಂದು? ಈ ರೀತಿ ಹೇಳುತ್ತೀರೇ ಅಥವಾ ತಮ್ಮನ್ನು ತಾವು ಬ್ರಹ್ಮಾಕುಮಾರ ಅಲ್ಲ, ನಾನು ಕ್ಷತ್ರಿಯ ಕುಮಾರ ಆಗಿದ್ದೇನೆ ಎಂದು ಹೇಳಿಕೊಳ್ಳುತ್ತೀರಾ? ಎಂದ ಮೇಲೆ ಬ್ರಾಹ್ಮಣ ಅರ್ಥಾತ್ ಬ್ರಹ್ಮಾ ತಂದೆಯ ಸಂಸ್ಕಾರವೇ ಬ್ರಾಹ್ಮಣರ ಸಂಸ್ಕಾರ. ಏನು ಮಾಡಲಿ ಇದು ನನ್ನ ಸಂಸ್ಕಾರವಾಗಿದೆ! ಎಂಬ ಶಬ್ದವನ್ನು ಎಂದೂ ಸಹ ಹೇಳಬಾರದು. ತಪ್ಪಾಗಿಯೂ ಸಹ, ಯೋಚಿಸಲೂ ಬಾರದು. ಇವು ನೆಪದ ಆಟಗಳಾಗಿವೆ.

ಈ ರೀತಿ ಹೇಳುವುದು ಸಹ ತಮ್ಮನ್ನು ತಾವು ತಪ್ಪಿಸಿಕೊಳ್ಳುವ ನೆಪವಾಗಿದೆ. ಹೊಸ ಜನ್ಮವಾಯಿತು. ಹೊಸ ಜನ್ಮದಲ್ಲಿ ಹಳೆಯ ಸ್ವಭಾವ ಹಳೆಯ ಸಂಸ್ಕಾರ ಎಲ್ಲಿಂದ ಪ್ರತ್ಯಕ್ಷ ಆಗುತ್ತವೆ? ಹಾಗಾದರೆ ಸಂಪೂರ್ಣವಾಗಿ ಸತ್ತಿಲ್ಲ. ಬದುಕಿದ್ದೀರಿ. ಅಥವಾ ಸ್ವಲ್ಪ ಸತ್ತಿದ್ದೀರಾ? ಬ್ರಾಹ್ಮಣ ಜೀವನ ಎಂದರೆ ಬ್ರಹ್ಮಾ ತಂದೆಯ ಪ್ರತಿಯೊಂದು ಹೆಜ್ಜೆಯ ಮೇಲೆ ಬ್ರಾಹ್ಮಣರ ಹೆಜ್ಜೆಯಿರಬೇಕು.

ಬಾಪ್‌ದಾದಾರವರು ಭಾಗ್ಯವನ್ನು ನೋಡುತ್ತಾ ಇಷ್ಟು ಶ್ರೇಷ್ಠ ಭಾಗ್ಯದ ಮುಂದೆ ಈ ಮಾತು ಚೆನ್ನಾಗೆನಿಸುವುದಿಲ್ಲ. ಈ ಬಾರಿ ಮುಕ್ತ ವರ್ಷವನ್ನು ಆಚರಿಸುತ್ತಿದ್ದೀರಿ ಅಲ್ಲವೇ- ಏನೆಂದು ಕ್ಲಾಸ್ ಮಾಡಿಸುತ್ತೀರಿ? ಮುಕ್ತಿ ವರ್ಷವಾಗಿದೆ. ಹಾಗಾದರೆ ಮುಕ್ತಿ ವರ್ಷ ಆಗಿದೆಯೋ ಅಥವಾ 99 ನಲ್ಲಿ ಬರುವುದಿದೆಯೇ? 98ರ ವರ್ಷ ಮುಕ್ತಿ ವರ್ಷವಾಗಿದೆಯೇ? ಈ ವರ್ಷವೇ ಮುಕ್ತಿ ವರ್ಷವಾಗಿದೆ ಎಂದು ತಿಳಿಯುವವರು ಕೈ ಅಲುಗಾಡಿಸಿ. ನೋಡಿ ಕೈ ಅಲುಗಾಡಿಸುವುದು ಬಹಳ ಸಹಜವಾಗಿದೆ ಏನಾಗುತ್ತದೆ ಎಂದರೆ- ಈಗ ಶ್ರೇಷ್ಠ ವಾಯುಮಂಡಲದಲ್ಲಿ ಕುಳಿತಿದ್ದೀರಲ್ಲವೇ ಖುಷಿಯಿಂದ ತೂಗುತ್ತಿದ್ದೀರಿ ಆದ್ದರಿಂದ ಕೈಗಳನ್ನು ಅಲುಗಾಡಿಸುತ್ತಿದ್ದೀರಿ ಆದರೆ ಮನಸ್ಸಿನಿಂದ ಕೈಯನ್ನು ಅಲುಗಾಡಿಸಿ, ಪ್ರತಿಜ್ಞೆ ಮಾಡಿ ಏನೇ ಹೊರಟು ಹೋಗಲಿ ಆದರೆ ಮುಕ್ತ ವರ್ಷದ ಪ್ರತಿಜ್ಞೆ ಹೋಗದಿರಲಿ ಇಂತಹ ಪಕ್ಕಾ ಪ್ರತಿಜ್ಞೆ ಇದೆಯೇ? ನೋಡಿ ಸಂಭಾಲನೆ ಮಾಡಿ ಕೈ ಎತ್ತಿರಿ. ಈ ದೃಶ್ಯ ಟಿವಿಯಲ್ಲಿ ಬರಲಿ ಅಥವಾ ಬರದಿರಲಿ, ಬಾಪ್‌ದಾದಾ ಅವರ ಬಳಿಯಂತೂ ನಿಮ್ಮ ಚಿತ್ರ ಬರುತ್ತಿದೆ ಎಂದ ಮೇಲೆ ಇಂತಹ ಬಲಹೀನ ಮಾತುಗಳಿಂದ ಸಹ ಮುಕ್ತರಾಗಿ, ನಿಮ್ಮ ಮಾತು ಸದಾ ಮಧುರ, ಬಾಬಾ ಸಮಾನವಾಗಿ ಸದಾ ಪ್ರತಿಯೊಂದು ಆತ್ಮನ ಪ್ರತಿ ಶುಭ ಭಾವನೆಯಿಂದ ಇರಬೇಕು. ಅದನ್ನೇ ಯುಕ್ತಿಯುಕ್ತ ಮಾತು ಎಂದು ಕರೆಯುತ್ತಾರೆ. ನಡೆದಾಡುತ್ತಾ, ಓಡಾಡುತ್ತಲೂ ಸಹ ಸಾಧಾರಣ ಮಾತನ್ನು ಮಾತನಾಡಬಾರದು, ಯಾರಿಗಾದರೂ ಅಕಸ್ಮಾತಾಗಿ ಬಂದರೆ ಇವು ಮಾತುಗಳಾ ಅಥವಾ ಮುತ್ತುಗಳಾ ಎಂಬ ಅನುಭವ ಮಾಡಿಕೊಳ್ಳಬೇಕು. ಶುಭ ಭಾವನೆಯಿಂದ ಕೂಡಿರುವ ಮಾತುಗಳು ವಜ್ರ ಮತ್ತು ರತ್ನಗಳೊಂದಿಗೆ ಸಮಾನವಾಗಿರುತ್ತದೆ. ಏಕೆಂದರೆ ಬಾಪ್‌ದಾದಾ ಹಲವಾರು ಬಾರಿ ಈ ಸೂಚನೆಯನ್ನು ಕೊಟ್ಟುಬಿಟ್ಟಿದ್ದಾರೆ- ಸಮಯ ಪ್ರಮಾಣ ಸರ್ವ ಖಜಾನೆಗಳನ್ನು ಜಮಾ ಮಾಡಲು ಸ್ವಲ್ಪವೇ ಸಮಯವಿದೆ. ಒಂದು ವೇಳೆ ಈ ಸಮಯದಲ್ಲಿ - ಸಮಯದ ಖಜಾನೆಯನ್ನು, ಸಂಕಲ್ಪದ ಖಜಾನೆಯನ್ನು, ಮಾತಿನ ಖಜಾನೆಯನ್ನು, ಜ್ಞಾನ ಧನದ ಖಜಾನೆಯನ್ನು, ಯೋಗದ, ಶಕ್ತಿಗಳ ಖಜಾನೆಯನ್ನು, ದಿವ್ಯ ಜೀವನದ, ಸರ್ವಗುಣಗಳ ಖಜಾನೆಯನ್ನು ಜಮಾ ಮಾಡಿಕೊಳ್ಳದಿದ್ದರೆ ಮತ್ತೆ ಇಂತಹ ಜಮಾ ಮಾಡಿಕೊಳ್ಳುವ ಸಮಯ ಸಿಗುವುದು ಸಹಜವಾಗಿರುವುದಿಲ್ಲ. ಇಡೀ ದಿನದಲ್ಲಿ ತಮ್ಮ ಈ ಒಂದೊಂದು ಖಜಾನೆಯ ಅಕೌಂಟ್( ಖಾತೆ) ಚೆಕ್(ಪರಿಶಿಲನೆ) ಮಾಡಿ ಹೇಗೆ ಸ್ಥೂಲ ಧನದ ಅಕೌಂಟ್ ಚೆಕ್ ಮಾಡಿಕೊಳ್ಳುತ್ತೀರಿ ಅಲ್ಲವೇ. ಇಷ್ಟು ಜಮಾ ಆಗಿದೆ ಎಂದು ಅದೇ ರೀತಿ ಪ್ರತಿಯೊಂದು ಖಜಾನೆಯ ಖಾತೆಯನ್ನು ಜಮಾ ಮಾಡಿ. ಪರಿಶೀಲನೆ ಮಾಡಿ. ಸರ್ವ ಖಜಾನೆಯೂ ಬೇಕಾಗಿದೆ ಒಂದುವೇಳೆ ಪಾಸ್ ವಿತ್ ಆನರ್ ಆಗಬೇಕೆಂದು ಬಯಸುತ್ತಿದ್ದರೆ ಪ್ರತಿಯೊಂದು ಖಜಾನೆಯ ಜಮಾದ ಖಾತೆ ಎಷ್ಟು ಸಂಪನ್ನ ಆಗಿರಬೇಕು ಎಂದರೆ 21 ಜನ್ಮ ಜಮಾ ಆಗಿರುವ ಖಾತೆಯಿಂದ ಪ್ರಾರಬ್ಧ ವನ್ನು ಅನುಭವಿಸಲು ಸಾಧ್ಯವಾಗಬೇಕು. ಇನ್ನೂ ಸಮಯದ ಟೂ ಲೇಟ್‌ನ (ತುಂಬಾ ತಡ) ಗಂಟೆ ಬಾರಿಸಿಲ್ಲ ಆದರೆ ಬಾರಿಸಲಿದೆ. ದಿನ ಹಾಗೂ ದಿನಾಂಕವನ್ನು ಹೇಳುವುದಿಲ್ಲ. ಇದ್ದಕ್ಕಿದ್ದಂತೆ ಹೊರ ಬೀಳುವುದು- ಟೂ ಲೇಟ್.

ಆಗ ಏನು ಮಾಡುವಿರಿ? ಆ ಸಮಯ ಜಮಾ ಮಾಡುವಿರೇ? ಎಷ್ಟು ಬಯಸಿದರೂ ಸಹ ಸಮಯ ಸಿಗುವುದಿಲ್ಲ. ಆದ್ದರಿಂದ ಬಾಪ್‌ದಾದಾರವರು ಹಲವು ಬಾರಿ ಸೂಚನೆಯನ್ನು ಕೊಡುತ್ತಿದ್ದಾರೆ- ಜಮಾ ಮಾಡಿಕೊಳ್ಳಿರಿ- ಜಮಾ ಮಾಡಿಕೊಳ್ಳಿರಿ- ಜಮಾ ಮಾಡಿಕೊಳ್ಳಿರಿ. ಏಕೆಂದರೆ ಈಗಲೂ ಸಹ ನಿಮ್ಮ ಟೈಟಲ್ ಆಗಿದೆ- ಸರ್ವಶಕ್ತಿವಂತ, ಶಕ್ತಿವಂತ ಅಲ್ಲ, ಸರ್ವ-ಶಕ್ತಿವಂತ. ಭವಿಷ್ಯದಲ್ಲಿಯೂ ಸಹ ಸರ್ವ ಗುಣ ಸಂಪನ್ನ ಆಗಿರುವಿರಿ, ಕೇವಲ ಗುಣ ಸಂಪನ್ನರಲ್ಲ. ಈ ಎಲ್ಲಾ ಖಜಾನೆಗಳನ್ನು ಜಮಾ ಮಾಡಿಕೊಳ್ಳುವುದು ಎಂದರೆ ಗುಣ ಹಾಗೂ ಶಕ್ತಿಗಳು ಜಮಾ ಆಗುತ್ತಿವೆ ಎಂದು. ಒಂದೊಂದು ಖಜಾನೆಯದ್ದು ಗುಣ ಹಾಗೂ ಶಕ್ತಿಯ ಜೊತೆ ಸಂಬಂಧವಿದೆ. ಸಾಧಾರಣ ಮಾತಲ್ಲದೇ ಮಧುರ ಭಾಷೆಯಿರಲಿ, ಇದು ಗುಣವಾಗಿದೆ. ಈ ರೀತಿ ಪ್ರತಿಯೊಂದು ಖಜಾನೆಯ ಸಂಬಂಧ ಗುಣ ಮತ್ತು ಶಕ್ತಿಯೊಂದಿಗೆ ಇದೆ.

ಬಾಪ್‌ದಾದಾರವರಿಗೆ ಮಕ್ಕಳ ಮೇಲೆ ಪ್ರೀತಿ ಇದೆ ಆದ್ದರಿಂದ ಮತ್ತೆ-ಮತ್ತೆ ಸೂಚನೆಯನ್ನು ಕೊಡುತ್ತಿದ್ದಾರೆ ಏಕೆಂದರೆ ಇಂದಿನ ಸಭೆಯಲ್ಲಿ ಎಲ್ಲಾ ವರೈಟಿ(ವಿವಿಧತೆ) ಇದೆ. ಚಿಕ್ಕ ಮಕ್ಕಳು ಇದ್ದಾರೆ. ಶಿಕ್ಷಕಿಯರು ಇದ್ದಾರೆ ಏಕೆಂದರೆ ಶಿಕ್ಷಕಿಯರೇ ಸಮರ್ಪಣೆಯಾಗಿದ್ದಾರೆ. ಕುಮಾರಿಯರು ಸಹ ಇದ್ದಾರೆ. ಪ್ರವೃತ್ತಿಯವರೂ ಇದ್ದಾರೆ. ಎಲ್ಲಾ ವರದಿಯವರು ಇದ್ದಾರೆ. ಒಳ್ಳೆಯದು. ಎಲ್ಲರಿಗೂ ಚಾನ್ಸ್ ಕೊಟ್ಟಿದ್ದಾರೆ. ಇದು ಬಹಳ ಒಳ್ಳೆಯದಾಗಿದೆ. ಮಕ್ಕಳದ್ದು ಬಹಳ ಸಮಯದ ಅರ್ಜಿಯಾಗಿದೆ. ಆಗಿತ್ತು ಅಲ್ಲವೇ ಮಕ್ಕಳೇ? ನಮಗೆ ಮಿಲನ ಮಾಡುವ ಅವಕಾಶ ಯಾವಾಗ ಸಿಗುವುದು? ಎಂದು, ಒಳ್ಳೆಯದು ಎಲ್ಲಾ ವೆರೈಟಿಯ ಹೂಗುಚ್ಛ ತಂದೆಯ ಸಮ್ಮುಖದಲ್ಲಿದೆ. ಮೊದಲು ಚಿಕ್ಕ ಮಕ್ಕಳು ಕೈಯನ್ನು ಎತ್ತಿರಿ.

ಚಿಕ್ಕ ಮಕ್ಕಳ ಗ್ರೂಪ್:- ಮಕ್ಕಳೆಂದರೆ ದೊಡ್ಡವರೆಲ್ಲರಿಗೂ ಪ್ರೀತಿ ಇರುತ್ತದೆ. ತಂದೆಗೆ ಸಹ ಮಕ್ಕಳ ಮೇಲೆ ಪ್ರೀತಿ ಇದೆ. ಮಕ್ಕಳೆಲ್ಲರೂ ಇಂದು ಬ್ರಾಹ್ಮಣರು, ನಾಳೆ ಯಾವ ರೀತಿಯಾಗಿ ತಯಾರಾಗುತ್ತಾರೆ? ಮಕ್ಕಳು ಹೇಳಿರಿ ನಾಳೆ ಹೇಗೆ ತಯಾರಾಗುತ್ತೀರಿ? (ದೇವತೆ ಆಗುತ್ತೇವೆ) ಒಳ್ಳೆಯದು ತಿಳಿದಿದೆಯೇ, ಮಕ್ಕಳಲ್ಲಿ ಯಾರು ದೇವಿ ಆಗುವುದಿಲ್ಲವೇ? ಎಲ್ಲರೂ ದೇವತೆಯಾಗುತ್ತೀರಾ, ಒಳ್ಳೆಯದು. ಮಕ್ಕಳಿಂದಲೇ ಬೆಳಕು ಬಂದಿದೆ. ನಿಮ್ಮೆಲ್ಲರ ಬೆಳಕನ್ನು ನೋಡಿ ವಾಹ್ ಮಕ್ಕಳೇ ವಾಹ್! ಎಂದು ಎಲ್ಲರೂ ಖುಷಿಯಾಗುತ್ತಿದ್ದಾರೆ. ಆದರೆ ಒಂದು ವಿಷಯವನ್ನು ನೆನಪಿಟ್ಟುಕೊಳ್ಳಬೇಕು. ಮಕ್ಕಳು ಬ್ರಾಹ್ಮಣ ಮಕ್ಕಳಾಗಿದ್ದಾರೆ ಎಂದರೆ ದೊಡ್ಡವರ ಭಾಗ್ಯ ಮತ್ತು ಮಕ್ಕಳದೂ ಭಾಗ್ಯವೇ ಆದ್ದರಿಂದ ತಂದೆಯ ಜೊತೆಯನ್ನು ಎಂದೂ ಮರೆತು ಹೋಗಬಾರದು. ಮಾಯೆ ಎಷ್ಟು ಆಕರ್ಷಿಸಿದರೂ ತಂದೆಯನ್ನು ಮರೆಯಬಾರದು. ಒಳ್ಳೆಯದು. ಮಕ್ಕಳೆಲ್ಲರೂ ಪ್ರತಿದಿನ ಕ್ಲಾಸಿಗೆ ಹೋಗುತ್ತಿದ್ದೀರಾ ಅಥವಾ ರವಿವಾರ, ರವಿವಾರ ಹೋಗುತ್ತಿದ್ದೀರಾ? ದಿನವೂ ಕ್ಲಾಸಿಗೆ ಹೋಗುವವರು ಕೈಯನ್ನು ಎತ್ತಿದರು. ನೀವೆಲ್ಲರೂ ದಿನವೂ ಹೋಗುವರು ಬಹಳಷ್ಟು ಜನರಿದ್ದೀರಿ, ಒಳ್ಳೆಯದು. ಟಿ. ವಿ ನೋಡುತ್ತಿದ್ದೀರಾ? ಎಲ್ಲರೂ ನಗುತ್ತಿದ್ದರು. ಒಂದು ವೇಳೆ ಒಳ್ಳೆಯ ವಿಷಯಗಳನ್ನು ನೋಡಿದರೆ ಒಳ್ಳೆಯದೇ ಆದರೆ ಕೆಟ್ಟ ವಿಷಯಗಳನ್ನು ನೋಡುವುದು ಒಳ್ಳೆಯದಲ್ಲ. ಯಾವಾಗಲಾದರೂ ನಾವು ಟಿ.ವಿ ನೋಡಿದರೂ ಕೂಡ ಕೆಟ್ಟ ವಿಷಯಗಳನ್ನು ನೋಡುವುದಿಲ್ಲ ಎಂದು ಇಂದು ಸಂಕಲ್ಪವನ್ನು ಮಾಡಿರಿ. ಯಾವಾಗಲಾದರೂ ಟಿ.ವಿಯನ್ನು ನೋಡುತ್ತಿರುವಾಗ ಕೆಟ್ಟ ವಿಷಯಗಳು ಬಂದರೆ ಟಿವಿಯನ್ನು ಬಂದ್ ಮಾಡುತ್ತೇವೆ. ಎಂದು ಪ್ರತಿಜ್ಞೆ ಮಾಡಿರಿ, ಮಾಡಬಲ್ಲಿರಾ? ಟಿ.ವಿಯಲ್ಲಿ ಕೆಟ್ಟ ವಿಷಯಗಳನ್ನು ನೋಡುತ್ತಿಲ್ಲ ಎನ್ನುವವರು ಕೈಯನ್ನೆತ್ತಿರಿ. ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ ಮಕ್ಕಳ ಟೀಚರ್ ಯಾರು? ಟೀಚರ್ಸ್ ಮಕ್ಕಳ ಚಾರ್ಟನ್ನು

ನೋಡಬೇಕು. ಮಕ್ಕಳೆಲ್ಲರೂ ಮುಕ್ತಿ ವರ್ಷವನ್ನು ಆಚರಿಸಿಕೊಳ್ಳುತ್ತಿದ್ದೀರಾ? ಸತ್ಯವಾದ ಮನಸ್ಸಿನಿಂದ ಕೈಯನ್ನು ಎತ್ತಿರಿ ದಾದಿಯರು ನಿಮಗೆ ಅವಕಾಶವನ್ನು ಕೊಟ್ಟಿದ್ದಾರೆ ಅಲ್ಲವೇ? ನಾವು ಕೂಡ ಮುಕ್ತಿ ವರ್ಷವನ್ನು ಆಚರಿಸಿಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡಿರಿ. ಹೊಡೆದಾಡಿಕೊಳ್ಳಬಾರದು, ಆವೇಶದಲ್ಲಿ ಬರಬಾರದು, ಕ್ರೋಧದಲ್ಲಿಯೂ ಬರಬಾರದು. ಕೆಲವು ಚಿಕ್ಕ ಮಕ್ಕಳು ಪ್ರತಿಜ್ಞೆಯಲ್ಲಿ ದೊಡ್ಡವರಿಗಿಂತಲೂ ಮುಂದಕ್ಕೆ ಹೋಗಿಬಿಡುತ್ತಾರೆ ಎಂದು ಬಾಪ್‌ದಾದಾವರಿಗೂ ತಿಳಿದಿದೆ ಆದ್ದರಿಂದ ಎಲ್ಲರೂ ಮುಂದಕ್ಕೆ ಹೋಗಿ ತೋರಿಸಬೇಕು, ಒಳ್ಳೆಯದು. ಮಕ್ಕಳ ಸಭೆ ಕೂಡ ಚೆನ್ನಾಗಿ ಇದೆ.

ಕುಮಾರಿಯರ ಗ್ರೂಪ್ : ಕುಮಾರಿಯರು ಸಹ ಬಹಳಷ್ಟು ಜನರಿದ್ದಾರೆ. (2,000 ಜನ ಕುಮಾರಿಯರು ಬಂದಿದ್ದರು). ಕುಮಾರಿಯರು ಧೈರ್ಯವನಿಟ್ಟಿದ್ದೀರಿ ಒಳ್ಳೆಯದು ಕುಮಾರಿಯರ ಬಗ್ಗೆ ಬಾಪ್‌ದಾದಾ ಯಾವಾಗಲೂ ಅದೃಷ್ಟವಂತ ಜೀವನ ಎಂದು ಹೇಳುತ್ತಾರೆ. ನೋಡಿರಿ ಕುಮಾರರು ಹೇಳುತ್ತಾರೆ. ಕುಮಾರಿಯರು ಟೀಚರ್ ಆದರೆ ಸೆಂಟರಿಗೆ ಹೋದ ತಕ್ಷಣ ದೀದಿ, ದೀದಿ ಎಂದು ಕರೆಯುತ್ತಾರೆ. ಕುಮಾರರು ಹೋದಾಕ್ಷಣ ಎಷ್ಟು ಹಳೆಯವರಾದರೂ ದಾದಾ ದಾದಾ ಎಂದು ಕರೆಯುವುದಿಲ್ಲ ಎಂದು ಹೇಳುತ್ತಾರೆ. ಕುಮಾರಿಯರಿಗೆ ಟ್ರೈನಿಂಗ್ ಆದ ತಕ್ಷಣ ಸೆಂಟರ್ನಲ್ಲಿ ಇರುವ ಅವಕಾಶ ಲಭಿಸುತ್ತದೆ .ಆದರೆ ಕುಮಾರರು ಸೆಂಟರ್ ಸಂಭಾಳಿಸುತ್ತೇವೆ ಎಂದರೆ ದಾದಿಯರು ಯೋಚಿಸುತ್ತಾರೆ. ಎಂದರೆ ಕುಮಾರಿಯರ ಭಾಗ್ಯ ಬಹಳ ಸಹಜವಾಗಿ ತಯಾರಾಗಿ ಇದೆ. ಕುಮಾರಿ ಟ್ರೈನಿಂಗ್ ಮಾಡಿದ ತಕ್ಷಣ ಯೋಗ್ಯವಾಗಿ ಆದ ತಕ್ಷಣ ವರದಕ್ಷಣೆಯಾಗಿ ಸೆಂಟರ್ ಲಭಿಸುತ್ತದೆ. ಆದ್ದರಿಂದ ಕುಮಾರಿಯರ ಜೀವನ ಎಷ್ಟು ಶ್ರೇಷ್ಠವಾದದ್ದು? ಎಷ್ಟು ಸುವರ್ಣ ಅವಕಾಶವೋ ಯೋಚಿಸಿರಿ. ಒಂದು ವೇಳೆ ಈಗಿನಿಂದ ಸೇವಾಧಾರಿಯಾಗದಿದ್ದರೆ ಭವಿಷ್ಯದಲ್ಲಿ ಏನಾಗುತ್ತೀರಿ? ಸೇವಾಧಾರರು ಯಾರೊಂದಿಗೆ ಭೇಟಿಯಾಗುತ್ತಿರಿ? ಯಾರಾದರೆ ಸೇವೆ ಮಾಡುತ್ತಾರೆಯೋ ಅವರೊಂದಿಗೆ ಭೇಟಿಯಾಗುತ್ತಾರೆ? ಆದ್ದರಿಂದ ಕುಮಾರಿಯರು ಬಹಳ ಬೇಗವಾಗಿ ತಮ್ಮ ಜೀವನವನ್ನು ನಿರ್ಣಯಿಸಬೇಕು. ಆದರೆ ಬಾಪ್‌ದಾದಾ ಕುಮಾರಿಯರಿಗೆ ಒಂದು ವಿಷಯವನ್ನು ಸದಾ ಹೇಳುತ್ತಾರೆ. ಸತ್ಯವಾದ ಸೇವಾಧಾರಿ ಕುಮಾರಿಯು ಯಾರು ಎಂದರೆ ಸದಾ ಶಕ್ತಿ ರೂಪವಾಗಿ ಇರುವ ಕುಮಾರಿ ಎಂದು. ಒಂದು ವೇಳೆ ನಿಮಿತ್ತ ಸೇವಾಧಾರಿ ಶಕ್ತಿಶಾಲಿಯಾಗಿ ಇಲ್ಲದಿದ್ದರೆ ಇತರರನ್ನು ಶಕ್ತಿಶಾಲಿಯನ್ನಾಗಿ ಮಾಡಲಾಗುವುದಿಲ್ಲ. ಕುಮಾರಿಯರು ಶಕ್ತಿಶಾಲಿಯಾಗಿ ಇರಬೇಕು. ಕೋಮಲವಾಗಿ ಇರಬಾರದು. 1. ಕೋಮಲತೆ 2. ಯಾರೋ ಒಬ್ಬರ ಪ್ರಭಾವದಲ್ಲಿ ಬರುವುದು. ಎಂದರೆ ಜ್ಞಾನದ ಪ್ರಭಾವ ಹಾಕುವವರಾಗಿ ಇರದೇ, ಇತರರ ಪ್ರಭಾವದಲ್ಲಿ ಪ್ರಭಾವಿತರಾಗುತ್ತಿದ್ದೀರಿ. ಈ ಒಂದು ವಿಷಯದಲ್ಲಿಯೇ ಕುಮಾರಿಯ ಬಗ್ಗೆ ದಾದಿಯರಿಗೆ ಭಯವೆನಿಸುತ್ತದೆ. ತಂದೆಗೆ ಪ್ರಭಾವಿತರನ್ನಾಗಿ ಮಾಡಲು ನಿಮ್ಮಿತರಾಗಿದ್ದೀರಿ ಆದರೆ ಸ್ವಯಂ ಪ್ರಭಾವಿತವಾಗಿ ಬಿಟ್ಟರೆ ಫಲಿತಾಂಶವೇನು ಬರುತ್ತದೆ? ಬಾಪ್‌ದಾದಾ ಹೇಳಿದಾಕ್ಷಣ ಕುಮಾರಿಯರು ಹಾಗೆಯೇ ಎನ್ನುತ್ತಿದ್ದಾರೆ. ಹೋಗುತ್ತೇವೆ ಎನ್ನುತ್ತಿದ್ದಾರೆ ಆದರೆ ಈಗ ಸಮಯವನ್ನು ಅನುಸರಿಸಿ ಸೇವಾ ಕೇಂದ್ರವನ್ನು ನಿರ್ವಿಘ್ನವಾಗಿ ಮಾಡುವ ಶಕ್ತಿಶಾಲಿ ಕುಮಾರಿಯರು ಬೇಕು. ನಿರ್ವಿಘ್ನ ಎಂಬ ಸರ್ಟಿಫಿಕೇಟ್ ಸ್ವಯಂನಿಂದ ತೆಗೆದುಕೊಳ್ಳಬೇಕು ಮತ್ತು ಸಹಯೋಗಿಗಳಿಂದ ಕೂಡ ಪಡೆಯಬೇಕು. ಇಂತಹ ಕುಮಾರಿಯರಾಗಿದ್ದೀರಾ ಅಥವಾ ಸ್ವಲ್ಪ ವಸ್ತು ಅಥವಾ ವ್ಯಕ್ತಿಯ ಪ್ರಭಾವದಲ್ಲಿ ಬರುವವರಾಗಿದ್ದೀರಾ? ಯಾರು ಏನು ಯೋಚಿಸುತ್ತಿದ್ದೀರಿ? ನಿರ್ವಿಘ್ನ ಕುಮಾರಿ, ವಿಘ್ನ ವಿನಾಶಕ ಕುಮಾರಿ, ಬಲಹೀನರನ್ನು ಶಕ್ತಿಶಾಲಿಯನ್ನಾಗಿ ಮಾಡುವ

ಕುಮಾರಿ ಬಾಪ್‌ದಾದಾರವರಿಗೆ ಬೇಕು. ಅಷ್ಟೇ ಹೊರತು ಬಾಪ್‌ದಾದಾ ಮತ್ತು ದಾದಿಯರು ಸಹಯೋಗಿಯರನ್ನಾಗಿ ಕಳಿಸಿದರೆ ನೀವು ಸಹಯೋಗಿಗಳಿಗೆ ಬದಲಾಗಿ ತಲೆನೋವು (ಹೆಡ್‌ಏಕ್) ನಂತೆ ತಯಾರಾಗಬಾರದು. ಅಂತಹ ಕುಮಾರಿಯಾಗಬಾರದು. ಏನೆಂದು ಭಾವಿಸುತ್ತಿದ್ದೀರಿ? ನಾವು ವಿಘ್ನ ವಿನಾಶಕರು ಆಗಿಯೇ ಇರುತ್ತೇವೆ ಎಂದು, ಈ ವಿಧವಾದ ಕುಮಾರಿಗಳು ತಯಾರಾಗಿಯೇ ಇದ್ದೀರಾ?  ಯಾರು ಹೀಗೆ ತಯಾರಾಗುತ್ತೀರೋ ಅವರು ಕೈಯನ್ನೆತ್ತಿರಿ. ಮನಸ್ಸಿನಿಂದ ಎತ್ತುತ್ತಿದ್ದೀರಾ ಅಥವಾ ಸಂಘಟನೆಯಲ್ಲಿ ನಾಚಿಕೆಯಿಂದ ಎತ್ತುತ್ತಿದ್ದೀರಾ? ಹೀಗೆ ವಿಘ್ನ ವಿನಾಶಕರಾಗಿ ಸೇವಾ ಕೇಂದ್ರಕ್ಕೆ ಹೋಗುತ್ತೇವೆ ಎಂದು ಹೇಳುವವರು ಒಮ್ಮೆ ಎದ್ದು ನಿಲ್ಲಿರಿ. ಉಳಿದವರು ಕುಳಿತುಕೊಳ್ಳಿರಿ 18 ವರ್ಷಗಳು ಆದವರು ನಾವು ವಿಘ್ನ ವಿನಾಶಕರಾಗಿ ಸೆಂಟರ್ಗೆ ಹೋಗುತ್ತೇವೆ ಎನ್ನುವವರು ಎದ್ದು ನಿಲ್ಲಿರಿ. ನೀವೆಲ್ಲರೂ ವಿಘ್ನ ವಿನಾಶಕ ನಿಮಿತ್ತ ಸೇವಾಧಾರಿಯಾಗಿದ್ದೀರಾ? (ಹೌದು) ಫೋಟೋ ತೆಗೆಯಿರಿ. ನಂತರ ದಾದಿಯರಿಗೆ ಈ ಕ್ಯಾಸೆಟ್ ಅನ್ನು ಕೊಡಬೇಕು ಮತ್ತು ನೀವು ನೋಟ್ ಮಾಡಿಕೊಳ್ಳಬೇಕು. ಯಾರ್ಯಾರು ಎಂದು. ಶುಭಾಶಯಗಳು, ಶುಭಾಶಯಗಳು. ಬಾಪ್‌ದಾದಾರವರು ಸಹ ಶುಭಾಶಯಗಳು ಕೊಡುತ್ತಿದ್ದಾರೆ ಆದರೆ ಬಲ ಭುಜವಾಗಬೇಕು. ಎಡ ಭುಜವಲ್ಲ. ಒಳ್ಳೆಯದು.

ಗೀತಾ ಪಾಠಶಾಲೆಯವರ ಗ್ರೂಪ್: ಗೀತಾ ಪಾಠಶಾಲೆಯವರು ಕೈಯನ್ನು ಎತ್ತಿರಿ. ಎದ್ದು ನಿಲ್ಲಿರಿ. ಕೈಯನ್ನು ಅಲುಗಾಡಿಸಿರಿ. (ಸುಮಾರು 4000 ಜನ ಅಣ್ಣಂದಿರು, ಅಕ್ಕಂದಿರು ಇದ್ದಾರೆ) ಬಹಳಷ್ಟು ಜನರಿದ್ದಾರೆ, ಗೀತಾ ಪಾಠಶಾಲೆಗಳಿಗೆ ನಿಮಿತ್ತವಾದ ಮಕ್ಕಳನ್ನು ಸಹ ಬಾಪ್‌ದಾದಾರವರು ನಿಮಿತ್ತ ಸೇವಾದಾರರು ಎಂದು ಕರೆಯುತ್ತಾರೆ. ನಿಮ್ಮ ಕುಟುಂಬವನ್ನು ಸಹ  ಸಂಭಾಳಿಸುತ್ತಿದ್ದೀರಿ ಮತ್ತು ಅಲೌಕಿಕ ಸೇವೆಗೆ ಸಹ  ನಿಮಿತರಾಗುತ್ತಿದ್ದೀರಿ ಎಂದರೆ ಎರಡು ಕಾರ್ಯಗಳನ್ನು ಮಾಡುತ್ತಿದ್ದೀರಿ. ಆದರೆ ಗೀತಾ ಪಾಠಶಾಲೆಗಳಿಗೆ ನಿಮಿತ್ತವಾದ ಆತ್ಮರ ವಿಶೇಷತೆ ಏನೆಂದರೆ, ಸದಾ ಸ್ವಯಂ ಅನ್ನು ಪ್ರತಿಯೊಂದು ಕಾರ್ಯದಲ್ಲಿ ನಿಮಿತ್ತವಾಗಿ ಭಾವಿಸಿ ನಡೆಯುವುದು. ಏಕೆಂದರೆ ಬಾಪ್‌ದಾದಾ ನೋಡಿದರು ಗೀತಾ ಪಾಠಶಾಲೆಗಳನ್ನು ತೆರೆಯುವವರು ವಿಧ ವಿಧವಾದ ಸಂಕಲ್ಪಗಳಿಂದ ತೆರೆಯುತ್ತಿದ್ದಾರೆ ಅಥವಾ ನಡೆಸುತ್ತಿದ್ದಾರೆ. ಕೆಲವರು ಸತ್ಯವಾದ ಮನಸ್ಸಿನಿಂದ ಸೇವೆಗಾಗಿ ಗೀತಾ ಪಾಠಶಾಲೆಗಳನ್ನು ತೆರೆಯುತ್ತಿದ್ದಾರೆ ಆದರೆ ವೃದ್ಧಿಯಾದ ನಂತರ ಕೆಲವರಿಗೆ ಅಲ್ಲಲ್ಲಿ ಭಾವನೆಗಳ ಬೆರಕೆಯಾಗುತ್ತಿದೆ. ಕೆಲವರು ಕುಟುಂಬ ಪಾಲನೆ ಸಹ ಆಗುತ್ತದೆ ಮತ್ತು ನಿಮ್ಮಿತವಾಗಿ ಸೇವೆ ಕೂಡ ಆಗುತ್ತದೆ ಎಂದು ಗೀತಾ ಪಾಠಶಾಲೆಗಳನ್ನು ತಮ್ಮ ಕುಟುಂಬ ಪಾಲನೆಗಾಗಿಯೂ ತೆರೆಯುತ್ತಿದ್ದಾರೆ. ಆದರೆ ಗೀತಾ ಪಾಠಶಾಲೆ ಎಂದರೆ ನಿಮಿತ್ತವಾಗಿ ಸೇವೆಯನ್ನು ಮಾಡುವುದು ಏಕೆಂದರೆ ಯಾವ ಆತ್ಮನಾದರೂ ಆಗಲಿ ತಂದೆಯ ಸ್ನೇಹದ ಕಾರಣವಾಗಿ ಬರುತ್ತಾರೆ. ಆದ್ದರಿಂದ ನಿಮಿತ್ತರಾಗಿ ಕಾರ್ಯ ವ್ಯವಹಾರಗಳನ್ನು ನಡೆಸುವುದು ಬಹಳ ಅವಶ್ಯಕ. ಒಂದೇ ಒಂದು ನಿಸ್ವಾರ್ಥ ಸೇವಾ ಭಾವನೆಯಿಂದ ತೆರೆಯುವವರದೇ ಸತ್ಯವಾದ ಗೀತಾ ಪಾಠಶಾಲೆಯಾಗಿದೆ. ಶುಭ ಭಾವನೆಯಿಂದ ಗೀತಾ ಪಾಠಶಾಲೆಯನ್ನು ನಡೆಸುವವರನ್ನು ನೋಡಿ ಅವರ ಸಮಯವನ್ನು ಸಫಲ ಮಾಡಿಕೊಳ್ಳುತ್ತಿದ್ದಾರೆ ಎಂದು ಬಾಪ್‌ದಾದಾ ಬಹಳ ಖುಷಿಪಡುತ್ತಿದ್ದಾರೆ. ಅದೇ ಶುದ್ಧ ಭಾವನೆಯಿಂದ ಡಬಲ್ ಕಾರ್ಯವನ್ನು ಸಂಭಾಳಿಸುತ್ತಿದ್ದಾರೆ. ಹೆಸರು ಪ್ರಖ್ಯಾತವಾಗಬೇಕೆಂಬ  ಭಾವನೆ, ಲೌಕಿಕ ಕುಟುಂಬದ  ಪಾಲನೆಯ ಭಾವನೆ, ಇನ್ನೇನೂ  ಇರುವುದಿಲ್ಲ. ಇಂತಹ ಶುದ್ಧ ಭಾವನೆ, ಸೇವಾ ಭಾವನೆ ಇರುವ ನಿಮಿತ್ತ ಆತ್ಮರಿಗೆ ಬಾಪ್‌ದಾದಾ ಬಹಳ ಬಹಳ ಶುಭಾಶಯಗಳನ್ನು ಕೊಡುತ್ತಿದ್ದಾರೆ.

ಚೆನ್ನಾಗಿ ಇದ್ದೀರಿ ಮತ್ತು ಚೆನ್ನಾಗಿಯೇ ಇರುತ್ತೀರಿ ಎಂದು. ಆದರೆ ಪರಿಶೀಲಿಸಿಕೊಳ್ಳಿರಿ ಯಾವ ಭಾವನೆಯು ಬೆರಕೆಯಾಗಬಾರದು. ಸೇವಾ ಭಾವನೆಯ ಹೊರತು ಮತ್ತಿನ್ಯಾವ ಭಾವನೆಯನ್ನೂ ಬರಲು ಕೊಡಬಾರದು. ಸೇವೆಯನ್ನು ಮಾಡುತ್ತಿದ್ದೀರಿ ಎಂದರೆ ಅನೇಕ ಆತ್ಮರ ಕಲ್ಯಾಣವನ್ನು ಮಾಡುತ್ತಿದ್ದೀರಿ. ಇನ್ನೇನು ನೋಡಿದರೆಂದರೆ ಗೀತಾ ಪಾಠಶಾಲೆಯವರ ವಿಶೇಷತೆ ಏನೆಂದರೆ, ಕುಟುಂಬದಲ್ಲಿ ಇರುವವರನ್ನು ನೋಡಿ ಕುಟುಂಬದಲ್ಲಿ ಇರುವವರು ಧೈರ್ಯವನ್ನು ಮಾಡುತ್ತಿದ್ದಾರೆ. ಸೇವಾ ಕೇಂದ್ರದಲ್ಲಿರುವವರನ್ನು ನೋಡಿ ನಾವು ಸಹ ಇದೆಲ್ಲವನ್ನು ಬಿಡಲಾಗುವುದಿಲ್ಲವೇನೋ ಎಂದು ಭಾವಿಸುತ್ತಿದ್ದಾರೆ. ಆದರೆ ಕುಟುಂಬದಲ್ಲಿ ಇರುತ್ತಲೂ ಸೇವೆಗೆ ನಿಮಿತ್ತರಾದ ಮಕ್ಕಳನ್ನು ನೋಡಿ ಕುಟುಂಬದಲ್ಲಿ ಇರುವವರಿಗೆ ಇನ್ನಷ್ಟು ಧೈರ್ಯ, ಉತ್ಸಾಹ, ಉಲ್ಲಾಸಗಳು ಬರುತ್ತಿವೆ ಆದ್ದರಿಂದ ಬಾಪ್‌ದಾದಾ ಗೀತಾ ಪಾಠಶಾಲೆಯವರಿಗೆ ಸಹ ಬಹಳಷ್ಟು ಸೇವೆಯ ಶುಭಾಶಯಗಳು, ಪ್ರೀಯಸ್ಮೃತಿಗಳನ್ನು ಕೊಡುತ್ತಿದ್ದಾರೆ. ಒಂದು ಕೈಯ ಚಪ್ಪಾಳೆಯನ್ನು ಹೊಡೆಯಿರಿ(ಕೈಯನ್ನು ಅಲುಗಾಡಿಸುವುದು). ಒಳ್ಳೆಯದು.

ಸಮರ್ಪಣೆಯಾದ ಟೀಚರ್ಸ್ ನ ಗ್ರೂಪ್: ಚೆನ್ನಾಗಿ ಮಾಡಿದ್ದೀರಿ, ಧೈರ್ಯವಿಟ್ಟು ಸೇವೆಗೆ ನಿಮಿತ್ತರಾಗಿ ಪ್ರತ್ಯಕ್ಷತೆಯ ಸ್ಟೇಜಿನ ಮೇಲೆ ಬಂದಿದ್ದೀರಿ. ತಂದೆಯವರಾಗುವುದು ಮತ್ತು ತಂದೆಯ ಕೈಯಲ್ಲಿ ಕೈ ಇಡುವ ಮಹೋತ್ಸವವನ್ನು ಐದು ಆರು ವರ್ಷಗಳ ಮೊದಲೇ ಆಚರಿಸಿಕೊಂಡಿದ್ದೀರಿ ಆದರೆ ಈಗ ಕೈಯಲ್ಲಿರುವ ಕೈಯನ್ನು ಯಾರು ಬಿಡಿಸದ ರೀತಿ ಗಟ್ಟಿಯಾಗಿ ಇಟ್ಟುಕೊಳ್ಳಬೇಕು. ಆದ್ದರಿಂದ ಬಾಪ್‌ದಾದಾ ಸಮರ್ಪಣೆಯಾದ ಟೀಚರ್ಸ್ ಗೆ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಸದಾ ಕೈಯಲ್ಲಿ ಕೈಯನ್ನಿಟ್ಟು ಸಾಂಗತ್ಯದಲ್ಲಿ ಇರುತ್ತಾ ವಿಜಯೀ ಮಾಲೆಯನ್ನು ಕೊರಳಿನಲ್ಲಿ ಹಾಕಿಕೊಳ್ಳಿರಿ. ಈಗ ಯಾವ ಸ್ಥಾನದಲ್ಲಿ ಇದ್ದೀರೋ ಆ ಸ್ಥಾನ ಮತ್ತು ಸ್ವಯಂ ಅನ್ನು ನಿರ್ವಿಘ್ನವಾಗಿ ತಯಾರು ಮಾಡಿಕೊಳ್ಳಬೇಕು. ಯಾವ ವಿಘ್ನದ ರಿಪೋರ್ಟ್ ಬರಬಾರದು. ಸ್ವ ಪುರುಷಾರ್ಥದಲ್ಲಿಯೂ ವಿಘ್ನ ರೂಪವಾಗಬಾರದು. ಕೆಲವು ಬಾರಿ ಬಾಹ್ಯವಾಗಿ ಯಾವ ವಿಘ್ನಗಳು ಇರದಿದ್ದರೂ ಮನಸ್ಸಿನಲ್ಲಿ ಅಂತೂ ಬರುತ್ತವೆಯಲ್ಲವೇ. ಆದ್ದರಿಂದ ಮನಸ್ಸಿನಿಂದಲೂ ವಿಘ್ನ ಬರಬಾರದು, ಸಹಯೋಗಿಗಳಿಂದಲೂ ವಿಘ್ನ ಬರಬಾರದು, ವಿದ್ಯಾರ್ಥಿಗಳಿಂದಲೂ ಯಾವುದೇ ವಿಘ್ನ ಬರಬಾರದು. ಅರ್ಥಾತ್ ಸ್ವಯಂ ನಿರ್ವಿಘ್ನ, ಸೇವಾಕೇಂದ್ರ ನಿರ್ವಿಘ್ನ, ಸಹಯೋಗಿಗಳಿಂದ ನಿರ್ವಿಘ್ನ ಈ ಮೂರು ಸರ್ಟಿಫಿಕೇಟ್ಗಳನ್ನು ಈ ಮುಕ್ತಿ ವರ್ಷದಲ್ಲಿ ಪಡೆಯಬೇಕು. ಅಂಗೀಕರಿಸುತ್ತೀರಾ? ಇತರರು ವಿಘ್ನವಾಗಿದರೆ ಏನು ಮಾಡುತ್ತೀರಿ? ನೀವಂತೂ ನಿರ್ವಿಘ್ನವಾಗಿ ಇರುತ್ತೀರಿ ಆದರೆ ಇತರರು ವಿಘ್ನ ಹಾಕುವವರು ಇದ್ದರೆ ಏನು ಮಾಡುತ್ತೀರಿ? ವಿಘ್ನ ವಿನಾಶಕರಾಗುತ್ತೀರಾ? ಸಮರ್ಪಣಾ ಸಮಾರೋಹ ಎಂದರೆ ಸಂಪೂರ್ಣ ಸಮಾರೋಹ. ಕೇವಲ ಸಮರ್ಪಣಾ ಸಮರೋಹವನ್ನು ಸ್ಮೃತಿಯಲ್ಲಿಟ್ಟುಕೊಳ್ಳುವುದೇ ಅಲ್ಲ. ಅದನ್ನೂ ಸ್ಮೃತಿಯಲ್ಲಿ ಇಟ್ಟುಕೊಳ್ಳಬೇಕು ಆದರೆ ಸಮಯ ಪ್ರಮಾಣವಾಗಿ ಈಗ ಸಂಪೂರ್ಣತೆಯ ಮಹೋತ್ಸವವನ್ನು ಆಚರಿಸಿಕೊಳ್ಳಬೇಕು. ಇಷ್ಟು ದೃಢ ನಿಶ್ಚಯದ ಕಂಕಣವನ್ನು ಕಟ್ಟಿಕೊಂಡು ಹೋಗಬೇಕು. ಬಾಪ್‌ದಾದಾ ಟೀಚರ್ಸ್ ಎಲ್ಲರಿಗೂ ಹೇಳುತ್ತಿದ್ದಾರೆ ದೇಶದ ವಿದೇಶದ ಟೀಚರ್ಸ್ ಎಲ್ಲರೂ ಕೈಯನ್ನು ಎತ್ತಿರಿ. ಒಳ್ಳೆಯದು. ಇಂದು ವಿದೇಶಿಯರು ಸಹ ಬಹಳಷ್ಟು ಜನರಿದ್ದಾರೆ. ವಿದೇಶಿ ಸೆಂಟರಿನವರಿಗೆ ಸುಸ್ವಾಗತ.

ಒಳ್ಳೆಯದು, ಬಾಪ್‌ದಾದಾರಿಗೆ ಟೀಚರ್ಸ್ ನ ಪ್ರತಿ ಒಂದು ಶುಭ ಭಾವನೆ ಇದೆ. ಹೇಳಲೇ? ಕೇವಲ ಕೇಳುತ್ತೀರಾ ಅಥವಾ ಮಾಡುತ್ತೀರಾ? ಕೇವಲ ಯೋಚಿಸುತ್ತೀರಾ ಅಥವಾ ಸ್ವರೂಪರಾಗುತ್ತೀರಾ? ಕೇಳುತ್ತೇವೆ, ಮಾಡುತ್ತೇವೆ ಎಂದರೆ ಒಳ್ಳೆಯದು. ಬಹಳ ಚಿಕ್ಕ ಶುಭ ಭಾವನೆ ಇದೆ. ದೊಡ್ಡ ವಿಷಯವೇನಲ್ಲ, ಬಹಳ ಚಿಕ್ಕ ವಿಷಯ. ದಾದಿ ಸಂದೇಶವನ್ನು ಕಳಿಸಿದ್ದಾರೆ ಈಗ ಸೇವಾ ಕೇಂದ್ರಗಳೆಲ್ಲಾ ನಿರ್ವಿಘ್ನವಾಗಬೇಕು. ಅದರ ಕರ್ತವ್ಯವು ಟೀಚರಿನದಾಗಿದೆ. ಇಂದಿನವರೆಗೆ ಟೀಚರ್ಸ್ ನಿಂದ ದೂರುಗಳು ಬರುತ್ತಿವೆ. ದಾದಿಯರ ಹತ್ತಿರ ಆ ಫೈಲ್ ಇದೆಯಲ್ಲವೇ? ಆಫೀಸಿನಲ್ಲಿ ಇರುವ ಈಶು ಅಕ್ಕನವರು ಹೇಳುತ್ತಿದ್ದಾರೆ ಸೇವಾಕೇಂದ್ರಗಳಿಂದ ಎಷ್ಟು ಕೆಲಸಕ್ಕೆ ಬಾರದ ಉತ್ತರಗಳು ಬರುತ್ತವೆ ಎಂದರೆ ಅವುಗಳಿಂದ ಕಸದ ಪುಟ್ಟಿ ತುಂಬಿ ಹೋಗುತ್ತಿದೆ ಎಂದು. ಹೌದಲ್ಲವೇ? ಅವು ಓದಲು ಸಹ ಸಮಯ ಹಿಡಿಸುತ್ತದೆ. ನಂತರ ಹರಿಯಲು ಸಹ ಸಮಯ ಹಿಡಿಸುತ್ತದೆ ಮತ್ತು ಅವುಗಳನ್ನು ಕಸದ ಪುಟ್ಟಿಯಲ್ಲಿ ಹಾಕಲೂ ಸಮಯವಿಡಿಸುತ್ತದೆ. ಈ ಶ್ರಮವೆಲ್ಲವೂ ವ್ಯರ್ಥವೇ ತಾನೇ? ಆದ್ದರಿಂದ ಬಾಪ್‌ದಾದಾರವರ ಶುಭ ಭಾವನೆ ಏನೆಂದರೆ, ಟೀಚರ್ಸ್ ಎಲ್ಲರೂ ಬಾಬಾರವರಿಗೆ ಬಲ ಭುಜಗಳು, ಎಡಭುಜಗಳಲ್ಲ. ಬಲಭುಜ ಆದವರು ಇರುವ ಸ್ಥಾನದಿಂದ ಅಥವಾ ಸೇವಾ ಕೇಂದ್ರದಿಂದ ಕಸದ ಪುಟ್ಟಿ ತುಂಬುವ ರೀತಿ ಸಮಾಚಾರ ಬಂದರೆ ಚೆನ್ನಾಗಿರುತ್ತದೆಯೇ? ಚೆನ್ನಾಗಿರುತ್ತದೆಯೇ? ಹೇಳಿರಿ ಚೆನ್ನಾಗಿರುತ್ತದೆಯಾ? ನಾವು ಈ ವರ್ಷ ಪ್ರತಿಯೊಬ್ಬರೂ ಸ್ವಯಂ ನ ವಿಘ್ನ ವಿನಾಶಕರಾಗಿ, ಸೆಂಟರ್ನ ವಿಘ್ನ ವಿನಾಶಕರಾಗಿ ಮತ್ತು ಸಹಯೋಗಿಗಳ ವಿಘ್ನ ವಿನಾಶಕರಾಗಿ ಮೂರು ಸರ್ಟಿಫಿಕೇಟ್‌ಗಳನ್ನು ಪಡೆಯುತ್ತೇವೆ. ಈ ಮೂರೂ ಸರ್ಟಿಫಿಕೇಟ್‌ಗಳನ್ನು ಪಡೆಯಲು ನಾವು ತಯಾರಾಗಿ ಇದ್ದೇವೆ ಎನ್ನುವ ಟೀಚರ್ಸ್ ಕೈಯನ್ನು ಎತ್ತಿರಿ. ಸೆಂಟರ್ನಲ್ಲಿ ಇರುವ ಅಣ್ಣಂದಿರು ಸಹ ಕೈಯನ್ನೆತ್ತಿರಿ. (ಎಲ್ಲರೂ ಕೈಯನ್ನು ಎತ್ತಿದರು) ಕೃತಜ್ಞತೆಗಳು.

ಈಗ ವೇಸ್ಟ್ ಪೇಪರ್ ನ ಬಾಕ್ಸ್ ಖಾಲಿಯಾಗಿರುತ್ತದೆ ಓದಬೇಕಾಗಿರುವ ಅವಶ್ಯಕತೆ ಇರುವುದಿಲ್ಲ. ಈಶು ಅಕ್ಕನವರು ಲೆಟರ್ಸ್ ಅನ್ನು ತೆಗೆದು, ತೆಗೆದು ಕೈಗಳು ಸುಸ್ತಾಗುತ್ತಿವೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇಲ್ಲಿ ಕುಳಿತಿದ್ದರೂ, ವಿದೇಶದಲ್ಲಿದ್ದು ಕೇಳುತ್ತಿದ್ದರೂ, ದೇಶದಲ್ಲಿ ಕೇಳುತ್ತಿದ್ದರೂ, ಮುರಳಿಯನ್ನು ಕೇಳುತ್ತಿದ್ದರೂ ಬಾಪ್‌ದಾದಾರವರಿಗೆ ಇದೇ ಶುಭಭಾವನೆ ಇದೆ. ಈ ವರ್ಷ ಯಾವ ಕಂಪ್ಲೇಂಟ್ ಬರಬಾರದು ಎಂದು. ದೂರುಗಳ ಫೈಲ್ ಸಮಾಪ್ತಿಯಾಗಬೇಕು. ಬಾಪ್‌ದಾದಾರವರ ಹತ್ತಿರ ಸಹ ಫೈಲ್ಸ್ ಇವೆ. ಈ ವರ್ಷ ದೂರುಗಳು ಸಮಾಪ್ತಿಯಾಗಿ ಬಿಡಬೇಕು. ಎಲ್ಲರೂ (ಫೈನ್) ಶುದ್ದವಾಗಿ ಬಿಡಬೇಕು. ಶುದ್ಧದಿಂದ ಪರಿಶುದ್ಧವೂ ಆಗಬೇಕು (ಫೈನ್-ರಿಫೈನ್). ಇಷ್ಟವೇ ತಾನೇ? ಯಾರು ಹೇಗಿದ್ದರೂ ಅವರೊಂದಿಗೆ ನಡೆಯುವ ವಿಧಿಯನ್ನು ಕಲಿಯಿರಿ. ಯಾರು ಏನು ಮಾಡುತ್ತಿದ್ದರೂ, ಪದೇ ಪದೇ ವಿಘ್ನ ರೂಪವಾಗಿ ಎದುರುಗಡೆ ಬಂದರೂ, ಆ ವಿಘ್ನಗಳಲ್ಲಿ ಸಮಯವನ್ನು ಉಪಯೋಗಿಸುವುದು ಸಹ ಎಲ್ಲಿಯವರೆಗೆ? ಇವುಗಳ ಸಮಾಪ್ತಿ ಸಮಾರೋಹವೂ ಆಚರಿಸಬೇಕಲ್ಲವೇ? ಆದ್ದರಿಂದ ಇವರು ಹೀಗೆ ಮಾಡುತ್ತಿದ್ದಾರೆ ಎಂದು ಇತರರನ್ನು ನೋಡಬಾರದು. ನಾನು ಏನು ಮಾಡಬೇಕು ಎಂದು ಯೋಚಿಸಬೇಕು. ಅವರು ಪರ್ವತವಾದರೆ ಅದರಿಂದ ನೀವೇ ಪಕ್ಕಕ್ಕೆ ಸರಿಯಬೇಕು. ಅಷ್ಟೇ ಹೊರತು ಪರ್ವತ ಸರಿಯುವುದಿಲ್ಲ. ಅವರು ಬದಲಾದರೆ ನಾನು ಬದಲಾಗುತ್ತೇನೆ ಎಂದು ಯೋಚಿಸುವುದು ಅರ್ಥಾತ್ ಪರ್ವತ ಪಕ್ಕಕ್ಕೆ ಸರಿದರೆ ನಾನು ಮುಂದಕ್ಕೆ ಹೋಗುತ್ತೇನೆ ಎಂದ ಹಾಗೆ. ಆಗ ಪರ್ವತ ಪಕ್ಕಕ್ಕೆ ಸರಿಯುವುದಿಲ್ಲ, ನೀವು

ಗುರಿಗೆ ತಲುಪುವುದಿಲ್ಲ. ಒಂದು ವೇಳೆ ಆ ಆತ್ಮನ ಪ್ರತಿ ನಿಮಗೆ ಶುಭ ಭಾವನೆ ಇದ್ದರೆ ಅವರಿಗೆ ಸೂಚನೆಯನ್ನು ಕೊಡಿ, ಮನಸ್ಸು, ಬುದ್ಧಿಯಿಂದ ಖಾಲಿಯಾಗಿ ಬಿಡಿ. ಸ್ವಯಂ ಆ ವಿಘ್ನಸ್ವರೂಪವಾಗಿ ಇರುವವರ ಯೋಚನೆಯಲ್ಲಿ ಬೀಳಬೇಡಿ. ನಂಬರ್‌ವಾರ್ ಆದ್ದರಿಂದ ಸ್ಥಿತಿ ಸಹ ನಂಬರ್‌ವಾರಾಗಿಯೇ ಇರುತ್ತದೆ. ಆದರೆ ನಾವು ನಂಬರ್‌ವನ್ ಆಗಬೇಕು ಹೀಗೆ ಸ್ವಯಂ ಪರಿವರ್ತನೆಯಾಗಿ ವಿಘ್ನ ಅಥವಾ ವ್ಯರ್ಥ ಸಂಕಲ್ಪಗಳನ್ನು ನಡೆಸುವ ಆತ್ಮರ ಪ್ರತಿ ಶುಭ ಭಾವನೆ ಇಟ್ಟುಕೊಳ್ಳುತ್ತಾ ನಡೆಯಿರಿ. ಸ್ವಲ್ಪ ಸಮಯ ಹಿಡಿಸುತ್ತದೆ, ಸ್ವಲ್ಪ ಶ್ರಮ ಎನಿಸುತ್ತದೆ ಆದರೆ ಕೊನೆಗೆ ಸ್ವ ಪರಿವರ್ತನೆಯಾದವರಿಗೆ ವಿಜಯೀ ಮಾಲೆ ಕೊರಳಿನಲ್ಲಿ ಬೀಳುತ್ತದೆ. ಶುಭ ಭಾವನೆಯಿಂದ ಅವರನ್ನು ಪರಿವರ್ತನೆ ಮಾಡಲಾದರೆ ಮಾಡಿರಿ. ಇಲ್ಲದಿದ್ದರೆ ಸೂಚನೆ ಕೊಡಿ, ನಿಮ್ಮ ಜವಾಬ್ದಾರಿಯನ್ನು ನೀವು ಪೂರ್ಣ ಮಾಡಿರಿ ಮತ್ತು ಸ್ವಯಂ ಪರಿವರ್ತನೆಯಾಗಿ ಮುಂದಕ್ಕೆ ಹಾರಿ ಹೋಗಿಬಿಡಿ. ಯಾವುದೇ ರೂಪದ ವಿಘ್ನವೂ ಸೆಳೆತದ ಬಂಗಾರ ದಾರವೇ, ಇದು ಸಹ ಹಾರಲು ಬಿಡುವುದಿಲ್ಲ. ಇದು ಬಹಳ ಆಳವಾದ ಮತ್ತು ಸತ್ಯತೆ ಎಂಬ ಪರದೆಯಲ್ಲಿರುವ ದಾರ. ಇದು ಸತ್ಯವಾದ ವಿಷಯವಲ್ಲವೇ ಎಂದುಕೊಳ್ಳುತ್ತಿದ್ದೀರಿ. ಹೀಗೆ ಆಗಬಾರದು ಎಂದುಕೊಳ್ಳುತ್ತಿದ್ದೀರಿ. ಆದರೆ ಇಂದಿನವರೆಗೆ ನೋಡುತ್ತಾ ಇದ್ದೀರಿ, ಇಂದಿನವರೆಗೆ ನಿಲ್ಲುತ್ತಾ ಇದ್ದೀರಿ, ಈಗ ನಿಮ್ಮನ್ನು ನೀವು ಆಳವಾದ ದಾರಗಳಿಂದಲೂ ಮುಕ್ತಿ ಮಾಡಿಕೊಳ್ಳಿ. ಮುಕ್ತಿ ವರ್ಷವನ್ನು ಆಚರಿಸಿಕೊಳ್ಳಿರಿ. ಆದ್ದರಿಂದ ಮಕ್ಕಳ ಆಸೆಗಳು, ಉತ್ಸಾಹ ಉಲ್ಲಾಸಗಳೇನಿವೆಯೋ ಅವೆಲ್ಲವುಗಳನ್ನು ಕಾರ್ಯಕ್ರಮಗಳನ್ನು ಆಚರಿಸಿ ಬಾಪ್‌ದಾದಾ ಪೂರ್ಣ ಮಾಡುತ್ತಿದ್ದಾರೆ. ಆದರೆ ಈ ವರ್ಷದ ಅಂತಿಮ ಕಾರ್ಯಕ್ರಮ ಮುಕ್ತಿ ವರ್ಷದ ಕಾರ್ಯಕ್ರಮದ ಫಂಕ್ಷನ್ ನಲ್ಲಿ ದಾದಿಯರಿಗೂ ಬಹುಮಾನ ಕೊಡುತ್ತಾರೆ. ಬಾಪ್‌ದಾದಾರವರಿಗಂತೂ ಫಂಕ್ಷನ್ ನಲ್ಲಿ ಸಂಪೂರ್ಣ ಎಂಬ ಬಹುಮಾನವನ್ನು ಮಕ್ಕಳು ಕೊಡಬೇಕು. ಒಳ್ಳೆಯದು.

ಬಾಪ್‌ದಾದಾ ಎಲ್ಲಾ ಸೇವಾ ಕೇಂದ್ರಗಳಿಗೆ ಸೇವೆಗಾಗಿ ಡೈರೆಕ್ಷನ್‌ಅನ್ನು ಕೊಡುತ್ತಿದ್ದಾರೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಈ ಎರಡು ತಿಂಗಳು ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿರಿ. ಧ್ವನಿಯನ್ನು ಎಷ್ಟು ವ್ಯಾಪಿಸಬಲ್ಲಿರೋ ಅಷ್ಟು ವ್ಯಾಪಿಸಿರಿ. ಎಲ್ಲಾ ಮೂಲೆಗಳಿಂದ ಧ್ವನಿಯನ್ನು ವ್ಯಾಪಿಸಿರಿ. ಯಾವ ಮೂಲೆಯೂ ಉಳಿಯಬಾರದು. ದೊಡ್ಡ ದೊಡ್ಡ ಪ್ರೋಗ್ರಾಮ್ಸ್ ನಲ್ಲಿಯೂ ಗುರಿಯನ್ನು ಇಟ್ಟುಕೊಳ್ಳಿರಿ- ಕೇವಲ ಕೇಳಿ ಹೋಗುವುದಲ್ಲ ತಯಾರಾಗಬೇಕೆಂಬ ಶುಭ ಬಯಕೆಯಿಂದ ಹೋಗಬೇಕು. ಇಂತಹ ವಿಧಿಯನ್ನು ತಯಾರು ಮಾಡಿರಿ. ಯಾವುದೋ ಒಂದು ಅನುಭವವನ್ನು ಮಾಡಿಕೊಂಡು ಹೋಗಬೇಕು. ವರ್ತಮಾನ ಸಮಯದಲ್ಲಿ ನಾಲ್ಕೂ ಕಡೆಯ ವಾಯುಮಂಡಲ ಸಹ ಸಹಯೋಗಿಯಾಗಿದೆ. ಆದರಿಂದ ಸಹಜವಾಗಿ ಸಫಲತೆ ಲಭಿಸುವ ಸಮಯ. ಅದಕ್ಕಾಗಿ ಧ್ವನಿಯನ್ನು ಬಹಳ ಚೆನ್ನಾಗಿ ವ್ಯಾಪಿಸಿರಿ ಮತ್ತು ಜೊತೆ ಜೊತೆ ಯಾವ ಚಿಕ್ಕ ಚಿಕ್ಕ ಸ್ಥಾನಗಳಿವೆಯೋ ದೊಡ್ಡ ಕಾರ್ಯಕ್ರಮಗಳನ್ನು ಮಾಡುವ ಧೈರ್ಯ ಇರದಂತಹ ಸ್ಥಳದಲ್ಲಿ ಚಿಕ್ಕ ಚಿಕ್ಕ ಗ್ರೂಪ್ಸ್ ಅರ್ಥಾತ್ 10-12 ಜನರಿದ್ದರೂ ಕೂಡ ಯೋಗ ಶಿಬಿರದ ಕಾರ್ಯಕ್ರಮವನ್ನು ಇಟ್ಟುಕೊಳ್ಳಿರಿ. ಒಂದು ವೇಳೆ ಸ್ಥಾನವಿಲ್ಲದಿದ್ದರೂ ಸಮೀಪದಲ್ಲಿರುವ ಯಾವುದೋ ಒಂದು ಸ್ಥಾನ ಸಿಕ್ಕರೂ ಒಳ್ಳೆಯದೇ. ಒಂದು ವೇಳೆ ಅದು ಸಹ ಇಲ್ಲದಿದ್ದರೆ, ಒಂದು ದಿನವಾದರೂ ಯೋಗ ಶಿಬಿರವನ್ನು ಇಡಿ. ರಜೆಯ ಒಂದು ದಿನ ಇಟ್ಟರೂ ಅವರಿಗೆ ಚೆನ್ನಾಗಿ ಅನುಭವವಾಗುತ್ತದೆ. ಆಗ ಅವರೇ ಎರಡನೇಯ ರವಿವಾರ ಸಹ ಬರುತ್ತೇವೆ ಎಂದು ಹೇಳುತ್ತಾರೆ. ಯೋಗ ಶಿಬಿರವೂ

ವಿದ್ಯಾರ್ಥಿಗಳನ್ನು ತಯಾರು ಮಾಡುತ್ತದೆ. ಕಾನ್ಫರೆನ್ಸ್ ಮತ್ತು ಸ್ನೇಹ ಮಿಲನ, ಚಿಕ್ಕ ಚಿಕ್ಕ ಸ್ನೇಹ ಮಿಲನಗಳು ಸಹ ಆತ್ಮರನ್ನು ಸಮೀಪ ತರುತ್ತವೆ. ಆದರೆ ದೊಡ್ಡ ಕಾರ್ಯಕ್ರಮ ಪ್ರಭಾವ ಮಾಡುತ್ತದೆ. ಹೆಸರು ಪ್ರಸಿದ್ಧ ವಾಗುತ್ತದೆ. ಪ್ರಚಾರ ಸಹ ಚೆನ್ನಾಗಿ ಆಗುತ್ತದೆ. ಆದ್ದರಿಂದ ಎರಡೂ ಅವಸರವೇ. ಚಿಕ್ಕ ಸ್ಥಾನಗಳು ಮತ್ತು ಚಿಕ್ಕ ಸೆಂಟರ್ಸ್ ನಲ್ಲಿ ಚಿಕ್ಕ ಚಿಕ್ಕ ಸ್ನೇಹ ಮಿಲನಗಳನ್ನು ಇಟ್ಟುಕೊಳ್ಳಿರಿ ಅಥವಾ ಚಿಕ್ಕ ಯೋಗ ಶಿಬಿರದ ಕಾರ್ಯಕ್ರಮವನ್ನು ಇಟ್ಟುಕೊಳ್ಳಿರಿ. ಅದರಿಂದ ಸಮಯ ಸಹಜವಾಗಿ ಲಭಿಸಿದಾಗ ಅರ್ಥಾತ್ ವಾತಾವರಣವನ್ನು ಅನುಸರಿಸಿ, ಸೌಕರ್ಯಗಳನ್ನು ಅನುಸರಿಸಿ, ಸಹಜ ಸಮಯದಲ್ಲಿ ಒಂದು ತಿಂಗಳು ಪ್ರತಿಯೊಂದು ಬ್ರಾಹ್ಮಣಾತ್ಮನ ಸ್ವಉನ್ನತಿಯ ಬಗ್ಗೆ ಸರ್ವಖಜಾನೆಗಳನ್ನು ಜಮಾ ಮಾಡಿಕೊಳ್ಳುವ ಅಭ್ಯಾಸದ ಭಟ್ಟಿಯನ್ನು ಇಟ್ಟುಕೊಳ್ಳಬೇಕು. ಒಂದು ತಿಂಗಳು ಸ್ವ ಉನ್ನತಿಯ ಸಲುವಾಗಿ ನಿಗದಿಪಡಿಸುವುದು ಬಹಳ ಅವಶ್ಯಕವಾಗಿದೆ. ಇದರಲ್ಲಿ ಸ್ವಲ್ಪ ನವೀನತೆ ಇರಬೇಕು. ಇಲ್ಲಿಯವರೆಗೆ ಆಗಿರುವ ಭಟ್ಟಿಗಳು ಚೆನ್ನಾಗಿಯೇ ಆಗಿವೆ. ಆದರೆ ಈಗ ಅವುಗಳಲ್ಲಿ ಯಾವುದೋ ಒಂದು ಹೊಸತನ್ನು ಜೋಡಿಸಿರಿ. ಸ್ವಲ್ಪ ಸಮಯ ಅಂತರ್ಮುಖತೆಯ ಮೌನ, ಮನಸ್ಸಿನ ಮೌನವೂ ಸಹ ಇರಬೇಕು ಬಾಯಿಯ ಮೌನವಂತೂ ಪ್ರಪಂಚದವರು ಸಹ ಇಟ್ಟುಕೊಳ್ಳುತ್ತಿದ್ದಾರೆ. ಆದರೆ ವ್ಯರ್ಥ ಸಂಕಲ್ಪಗಳಿಂದ ಮನಸ್ಸು ಮೌನವಾಗಿ ಇರಬೇಕು. ಟ್ರಾಫಿಕ್ ಕಂಟ್ರೋಲ್ ಮಾಡಲು ವ್ಯರ್ಥವನ್ನು ಹೇಗಾದರೆ ಕಂಟ್ರೋಲ್ ಮಾಡುತ್ತಿದ್ದೀರೋ ಅದೇ ರೀತಿಯಾಗಿ ಮಧ್ಯ ಮಧ್ಯದಲ್ಲಿ ಒಂದು ದಿನ ಮನಸ್ಸಿನ ವ್ಯರ್ಥದ ಟ್ರಾಫಿಕ್ ಕಂಟ್ರೋಲ್ ಮಾಡಿರಿ.

ಜ್ಞಾನ ಮನನದ ಜೊತೆ ಶುಭ ಭಾವನೆ, ಶುಭಕಾಮನೆಯ ಸಂಕಲ್ಪಗಳು, ಶಕ್ತಿಯನ್ನು ಕೊಡುವ ಅಭ್ಯಾಸ, ಈ ಮನಸ್ಸಿನ ಮೌನ ಅಥವಾ ಟ್ರಾಫಿಕ್ ಕಂಟ್ರೋಲ್ ಮಧ್ಯ ಮಧ್ಯದಲ್ಲಿ ಒಂದು ದಿನ ವಿಶೇಷವಾಗಿ ಮಾಡಿರಿ. ಒಂದು ವೇಳೆ ಯಾರಿಗಾದರೂ ರಜೆ ಸಿಗದಿದ್ದರೂ ವಾರದಲ್ಲಿ ಒಂದು ದಿನ ರಜೆಯಂತೂ ಇರುತ್ತದೆಯಲ್ಲವೇ ಅದನ್ನನುಸರಿಸಿ ನಿಮ್ಮ ನಿಮ್ಮ ಸ್ಥಾನಗಳಲ್ಲಿ ನಿರ್ಣಯ ಮಾಡಿಕೊಳ್ಳಿ. ಆದರೆ ಒಂದು ತಿಂಗಳು ವಿಶೇಷವಾಗಿ ಏಕಾಂತವಾಸಿ ಮತ್ತು ಖಜಾನೆಗಳ ಉಳಿತಾಯದ ಪ್ರೋಗ್ರಾಮನ್ನು ತಪ್ಪದೇ ಮಾಡಿರಿ. ಎಕಾನಮಿ ಮತ್ತು ಎಕ್ ನಾಮಿ ಬಾಪ್‌ದಾದಾ ತನ್ನ ನಿಯಮ ಪ್ರಮಾಣವಾಗಿ ನವೆಂಬರ್ ನಿಂದ ಬರುತ್ತಾರೆ. ಈ ರಥದೃಢಸಂಕಲ್ಪ ಧೈರ್ಯ ಮತ್ತು ಸಂಭಾಲನೆಯಿಂದ ಈ ವರ್ಷ ನಿರ್ವಿಘ್ನವಾಗಿ ಸಮಾಪ್ತಿಯಾಗಿಬಿಟ್ಟಿದೆ ಮತ್ತು ಇನ್ನೂ ಆಗುತ್ತದೆ. ಈಗಲೂ ಮಕ್ಕಳಲ್ಲಿ ಉತ್ಸಾಹವಿದೆ ರಥ ತಯಾರಾಗಿ ಇದ್ದರೆ ರಥಿಕನು ಬರಲು ಏನು? ಎಂದು ಆದರೆ ಮಧ್ಯ ಮಧ್ಯದಲ್ಲಿ ವಿಶ್ರಾಂತಿ ಸಹ ಪಡೆಯಬೇಕು. ರಥಕ್ಕೆ ವಿಶ್ರಾಂತಿಯನ್ನು ಕೊಡಬೇಕು. ಅಷ್ಟೇ ಆಗಲಿ, ಹೆಚ್ಚು ಕೆಲಸದಲ್ಲಿ ಉಪಯೋಗಿಸಬಾರದು. ವಿಶ್ರಾಂತಿ ಸಮಯದಲ್ಲಿ ವಿಶ್ರಾಂತಿ, ಸೇವೆಯ ಸಮಯದಲ್ಲಿ ಸೇವೆಯನ್ನು ಮಾಡಬೇಕು. ಅಮೃತ ವೇಳೆ ಮುಖ್ಯವಾಗಿ ಪ್ಲಾನಿಂಗ್ ಬುದ್ಧಿ ಇರುವ ಆತ್ಮರನ್ನು ಬಾಪ್‌ದಾದಾ ಕಾರ್ಯಕ್ಕಾಗಿ ನಿಮಿತ್ತ ಮಾಡುತ್ತಾರೆ. ಅವರಿಗೆ ಹೊಸ ಹೊಸ ಸೇವಾ ವಿಧಿಗಳು ಟಚ್ ಆಗುತ್ತವೆ. ಕೇವಲ ನಿಮ್ಮ ಬುದ್ಧಿಯನ್ನು ತಂದೆಗೆ ಅರ್ಪಣೆ ಮಾಡಿ ಕುಳಿತುಕೊಳ್ಳಿರಿ. ಬುದ್ಧಿವಂತನಾಗಿರುವ ತಂದೆ ನಿಮ್ಮ ಬುದ್ಧಿಯನ್ನು ಟಚ್ ಮಾಡುತ್ತಾರೆ. ಪ್ಲಾನಿಂಗ್ ಬುದ್ಧಿ ಆತ್ಮರಿಗೆ ಈ ವರದಾನ ಲಭಿಸಲೇಬೇಕು ಆದ್ದರಿಂದ ನಿಮಿತ್ತರಾಗಿರಿ.

**ನಾಲ್ಕಾರು ಕಡೆಯ ಪರಮಾತ್ಮ ಪಾಲನೆ, ವಿದ್ಯೆ ಹಾಗೂ ಶ್ರೀಮತದ ಭಾಗ್ಯದ ಅಧಿಕಾರಿ ವಿಶೇಷ ಅತ್ಮರಿಗೆ, ಸದಾ ಯೋಚಿಸುವುದು ಹಾಗೂ ಸ್ವರೂಪವಾಗುವುದು ಎರಡು ಸಮಾನ ಮಾಡುವಂತಹ ತಂದೆಯ ಸಮಾನ ಅತ್ಮರಿಗೆ. ಸದಾ**

**ಪರಮಾತ್ಮನ ವಿಲ್ ಪವರ್‌ನ ಮುಖಾಂತರ ಸ್ವಯಂನಲ್ಲಿ ಹಾಗೂ ಸೇವೆಯಲ್ಲಿ ಸಹಜ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ನಿಮಿತ್ತ ಸೇವಾಧಾರಿ ಮಕ್ಕಳಿಗೆ, ಸದಾ ತಂದೆಯನ್ನು ಕಂಬೈನ್ಡ್ ರೂಪದಲ್ಲಿ ಅನುಭವ ಮಾಡುವಂತಹ, ಸದಾ ಜೊತೆಯನ್ನು ನಿಭಾಯಿಸುವಂತಹ ಎಲ್ಲಾ ಮಕ್ಕಳಿಗೂ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 31-01-1998.

***ಪಾಸ್ ವಿತ್ ಆನರ್ ಆಗಲು ಪ್ರತಿಯೊಂದು ಖಜಾನೆಯ ಖಾತೆಯನ್ನು ಪರಿಶೀಲಿಸಿ ಜಮಾ ಮಾಡಿಕೊಳ್ಳಿರಿ.***

ನೀವು ತಮ್ಮ ಸ್ವರೂಪದ ಸೀಟಿನಲ್ಲಿ ಸೆಟ್ ಆದಾಗ ಪ್ರತಿಯೊಂದು ಗುಣ, ಶಕ್ತಿ, ಪ್ರತಿಯೊಂದು ಪ್ರಕಾರದ ನಶೆಯು ಸ್ವತಹವಾಗಿ ಪ್ರತ್ಯಕ್ಷ ವಾಗುವುದು. ಪರಿಶ್ರಮ ಪಡಬೇಕಾಗಿಲ್ಲ ಇದನ್ನೇ ಬ್ರಾಹ್ಮಣತನದ ಸ್ವಾಭಾವಿಕ ಸಂಸ್ಕಾರ ಎಂದು ಕರೆಯಲಾಗುತ್ತದೆ. ಇದರಲ್ಲಿ ಬೇರೆ ಎಲ್ಲಾ ಜನ್ಮದ ಸಂಸ್ಕಾರಗಳು ಸಮಾಪ್ತಿಯಾಗಿ ಬಿಡುತ್ತವೆ. ಬ್ರಾಹ್ಮಣ ಜೀವನದ ಸ್ವಾಭಾವಿಕ ಸಂಸ್ಕಾರ ಗುಣ ಸ್ವರೂಪ, ಸರ್ವಶಕ್ತಿ ಸ್ವರೂಪ. ಹಾಗೂ ಉಳಿದ ಎಲ್ಲಾ ಹಳೆಯ ಸಂಸ್ಕಾರಗಳು ಬ್ರಾಹ್ಮಣ ಜೀವನದ ಸಂಸ್ಕಾರಗಳಲ್ಲ. ನನ್ನ ಸಂಸ್ಕಾರವಾಗಿದೆ, ನನ್ನ ಸ್ವಭಾವವೇ ಹೀಗೆ, ಎಂದು ಹೇಳುತ್ತಿದ್ದೀರಿ ಆದರೆ ನನ್ನ ಸಂಸ್ಕಾರ ಎಂದು ಯಾರು ಹೇಳುತ್ತಾರೆ? ಬ್ರಾಹ್ಮಣರೇ? ಅಥವಾ ಕ್ಷತ್ರಿಯರೇ? ಅಥವಾ ಹಿಂದಿನ ಜನ್ಮದ ಸ್ಮೃತಿ ಸ್ವರೂಪ ಆತ್ಮ ಹೇಳುತ್ತದೆಯೇ? ಬ್ರಾಹ್ಮಣರ ಸಂಸ್ಕಾರ ಯಾವುದು? ಬ್ರಹ್ಮಾ ತಂದೆಯ ಸಂಸ್ಕಾರವೇ ಬ್ರಾಹ್ಮಣರ ಸಂಸ್ಕಾರವಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ಪರಮಾತ್ಮನಿಂದ ಪಾಲನೆ, ವಿದ್ಯೆ ಮತ್ತು ಶ್ರೀಮತ ಅಥವಾ ವರದಾನವು ಪ್ರಾಪ್ತಿಯಾಗಿವೆ.

2. ನಾನು ದಿನಚರಿಯ ಆದಿಯಲ್ಲಿಯೇ ಪರಮಾತ್ಮನ ಪ್ರೀತಿಯಲ್ಲಿ ಲವಲೀನವಾಗಿ ಎಚ್ಚರಗೊಳ್ಳುತ್ತಿದ್ದೇನೆ.

3. ನಾನು ಸ್ವಯಂ ತಂದೆ ಪರಂದಾಮವನ್ನು ಬಿಟ್ಟು ನಮಗೆ ಶಿಕ್ಷಣ ಕೊಡಲು ಬರುತ್ತಿದ್ದಾರೆ ಎಂಬ ನನ್ನ ಭಾಗ್ಯವನ್ನು ಅನುಭವ ಮಾಡಿದ್ದೇನೆ.

4. ನನಗೆ ತಂದೆ ಸದ್ಗುರುವಿನ ರೂಪದಲ್ಲಿ ಪ್ರತಿಯೊಂದು ಕಾರ್ಯಕ್ಕಾಗಿ ಶ್ರೀಮತ ಮತ್ತು ಜೊತೆಯನ್ನು ಕೊಡುತ್ತಿದ್ದಾರೆ.

5. ತಂದೆಯ ಮಗುವಾದ ನನ್ನ ಪ್ರತಿಜ್ಞೆಯೂ ಸಹ ಜೊತೆಯಲ್ಲಿಯೇ ಇರುತ್ತೇನೆ, ಜೊತೆಯಲ್ಲಿಯೇ ತಿನ್ನುತ್ತೇನೆ, ಜೊತೆಯಲ್ಲಿಯೇ ಮಲಗುತ್ತೇನೆ ಮತ್ತು ಜೊತೆಯೇ ಹೋಗುತ್ತೇನೆ.

6. ನಾನು ಕಚೇರಿಗೆ(ಉದ್ಯೋಗಕ್ಕೆ) ಹೋಗುತ್ತಲೂ, ವ್ಯಾಪಾರ ಮಾಡುತ್ತಲೂ ಆ ವ್ಯಾಪಾರಕ್ಕೆ ನಾನು ನಿಮಿತ್ತನು, ತಂದೆ ಮಾಲೀಕನು ಎಂದು ಭಾವಿಸುತ್ತಿದ್ದೇನೆ.

7. ನನ್ನ ಶ್ರೇಷ್ಠವಾದ ಭಾಗ್ಯವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಸ್ಮೃತಿ ಸ್ವರೂಪವಾಗಿದ್ದೇನೆ.

8. ನಾನು ಯೋಚಿಸಿರುವುದರ ಸ್ವರೂಪವನ್ನು ಸಹ ಅನುಭವ ಮಾಡುವ ಅನುಭವೀ ಮೂರ್ತಿ ಆಗಿದ್ದೇನೆ.

9. ನನ್ನ ಸ್ವರೂಪದ ಸೀಟ್ನ ಮೇಲೆ ಸೆಟ್ಟಾಗಿ ಪ್ರತಿಯೊಂದು ಗುಣ, ಪ್ರತಿಯೊಂದು ಶಕ್ತಿ, ಪ್ರತಿಯೊಂದು ನಶೆಯು ನನ್ನಲ್ಲಿ ಸ್ವತಹವಾಗಿ ಪ್ರತ್ಯಕ್ಷವಾಗಿವೆ.

10. ನಾನು ಹಳೆಯ ಸಂಸ್ಕಾರಗಳಿಂದ, ಹಳೆಯ ಸ್ವಭಾವಗಳಿಂದ, ಪೂರ್ಣವಾಗಿ ಮರುಜೀವ ಆಗಿ ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡುವ ಸತ್ಯವಾದ ಬ್ರಾಹ್ಮಣನು.

11. ನಾನು ಬಲಹೀನ ಮಾತಿನಿಂದ ಮುಕ್ತವಾಗಿ ಮಾತುಗಳನ್ನು ಮಧುರವಾಗಿ, ತಂದೆಯ ಸಮಾನವಾಗಿ, ಶುಭ ಭಾವನೆಯಿಂದ ಇರುವ ಯುಕ್ತಿಯುಕ್ತ ಮಾತುಗಳನ್ನು ಮಾತನಾಡುತ್ತಿದ್ದೇನೆ.

12. ನಾನು ಸಂಗಮ ಯುಗದಲ್ಲಿ ಸಮಯ, ಸಂಕಲ್ಪ, ಮಾತು, ಜ್ಞಾನಧನ, ಯೋಗ, ಶಕ್ತಿ, ದಿವ್ಯ ಜೀವನದ, ಸರ್ವ ಗುಣಗಳ ಖಜಾನೆಯ ಖಾತೆಯನ್ನು ಪರಿಶೀಲಿಸಿಕೊಂಡು ಜಮಾ ಮಾಡಿಕೊಂಡು ಪಾಸ್ ವಿತ್ ಆನರ್ ಆಗಿದ್ದೇನೆ.

13. ನಾನು ವರ್ತಮಾನದಲ್ಲಿ ಸರ್ವಶಕ್ತಿವಾನ್ ಮತ್ತು ಭವಿಷ್ಯದಲ್ಲಿ ಸರ್ವಗುಣ ಸಂಪನ್ನನು.

14. ಮಾಯೆ ನನ್ನನ್ನು ಎಷ್ಟು ಆಕರ್ಷಿಸಿದರೂ ನಾನು ತಂದೆಯ ಜೊತೆಯನ್ನು ಸದಾ ನಿಭಾಯಿಸುತ್ತಿದ್ದೇನೆ.

15. ನಾನು ಸದಾ ಶಕ್ತಿವಂತವಾಗಿರುವ ಸತ್ಯವಾದ ಸೇವಾಧಾರಿಯಾಗಿದ್ದೇನೆ.

16. ನಾನು ಸ್ವಯಂ ಮತ್ತು ಸಹಯೋಗಿಗಳಿಂದ ನಿರ್ವಿಘ್ನ ಎಂಬ ಸರ್ಟಿಫಿಕೇಟನ್ನು ಪಡೆದಿದ್ದೇನೆ.

17. ನಾನು ಬಲಹೀನರನ್ನು ಶಕ್ತಿಶಾಲಿ ಮಾಡುವ ನಿರ್ವಿಘ್ನ ಕುಮಾರಿ, ವಿಘ್ನ ವಿನಾಶಕ ಕುಮಾರಿ ಆಗಿದ್ದೇನೆ.

18. ನಾನು ತಂದೆಗೆ ಬಲಬಜವಾಗಿದ್ದೇನೆ.

19. ನಾನು ಸತ್ಯವಾದ ಮನಸ್ಸಿನಿಂದ, ನಿಸ್ವಾರ್ಥ ಸೇವಾ ಭಾವನೆಯಿಂದ ನಿಮಿತ್ತವಾಗಿ ಗೀತಾ ಪಾಠಶಾಲೆಯನ್ನು ಸಂಭಾಳಿಸುವ ವಿಶ್ವಕಲ್ಯಾಣಕಾರಿಯಾಗಿದ್ದೇನೆ.

20. ನಾನು ಸ್ವಯಂ ಅನ್ನು ವಿಘ್ನ ವಿನಾಶಕವಾಗಿ, ಸೆಂಟರ್ ಅನ್ನು ವಿಘ್ನ ವಿನಾಶಕವಾಗಿ ಮತ್ತು ಸಹಯೋಗಿಗಳನ್ನು ವಿಘ್ನ ವಿನಾಶಕವಾಗಿ ಮಾಡುವ ಮೂರು ಸರ್ಟಿಫಿಕೇಟ್ಗಳನ್ನು ಪಡೆದಿದ್ದೇನೆ.

21. ನಾನು ಸಮರ್ಪಣಾ ಸಮಾರೋಹದೊಂದಿಗೆ ಸಂಪೂರ್ಣತೆಯ ಸಮಾರೋಹವನ್ನು ಸಹ ಆಚರಿಸಿಕೊಳ್ಳುವ ದೃಢ ನಿಶ್ಚಯದ ಕಂಕಣವನ್ನು ಕಟ್ಟಿಕೊಂಡಿದ್ದೇನೆ.

22. ನಾನು ಸ್ವಯಂ ಪರಿವರ್ತನೆಯಾಗಿ ವಿಘ್ನ ಅಥವಾ ವ್ಯರ್ಥ ಸಂಕಲ್ಪಗಳಿಂದ ನಡೆಯುತ್ತಿರುವ ಆತ್ಮನ ಪ್ರತಿ ಶುಭ ಭಾವನೆಯನ್ನು ಇಟ್ಟುಕೊಳ್ಳುವ ದಯಾಹೃದಯಸ್ವರೂಪ.

23. ನಾನು ಸೆಳೆತದ ಆಳವಾದ ದಾರಗಳಿಂದಲೂ ಮುಕ್ತ ನಾಗಿರುವ ಬಂಧನ್ ಮುಕ್ತ ಸ್ವರೂಪ.

24. ನಾನು ಜ್ಞಾನ ಮನನದ ಜೊತೆ ಜೊತೆ ಶುಭ ಭಾವನೆ, ಶುಭಕಾಮನೆಯ ಸಂಕಲ್ಪವನ್ನು, ಶಕ್ತಿಯನ್ನು ಕೊಡುವ ಅಭ್ಯಾಸವನ್ನು, ಮನಸ್ಸಿನ ಮೌನ ಅಥವಾ ಟ್ರಾಫಿಕ್ ಕಂಟ್ರೋಲ್ ನ ಅಭ್ಯಾಸವನ್ನು ಮಧ್ಯ ಮಧ್ಯದಲ್ಲಿ ವಿಶೇಷವಾಗಿ ಮಾಡುತ್ತಿದ್ದೇನೆ.